ಶ್ರೀ ಎಸ್. ಆರ್. ಬೊಮ್ಮಾಯಿ.—ಲೀಡರ್ ಆಫ್ ದಿ ಆಪೋಜಿಷನ್ ಅವರು ಮೊದಲು ಹೇಳಲಿ, ಆಮೇಲೆ ಇವರು ಹೇಳಲಿ.

ಅಧ್ಯಕ್ಷರು.—ಸ್ವಲ್ಪ ವೆಂಕಟರಾಮಯ್ಯನವರೇ, ವಿರೋಧ ಪಕ್ಷದ ಮುಖಂಡರು, ದೊಡ್ಡ ಮನಸ್ಸು ಮಾಡಿದರೆ.....

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನೀವು ಕೇಳುವುದು ಧರ್ಮವಲ್ಲ.

ಶ್ರೀ ಆರ್. ವೆಂಕಟರಾಮಯ್ಯ.—ನಿಮ್ಮ ಧರ್ಮ ಔದಾರ್ಯ ನಮಗೆ ಬೇಕಾಗಿಲ್ಲ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನಿಮ್ಮ ಔದಾರ್ಯ ನಮಗೆ ಬೇಕಾಗಿಲ್ಲ.

ಶ್ರೀ ಆರ್. ವೆಂಕಟರಾಮಯ್ಯ.—ನಿಮ್ಮಗೆ ರೈಟ್ಸ್ ಇದೆ ಎಂದು ಕೇಳಿದರೆ ನಾವು ಒಪ್ಪುವುದಿಲ್ಲ. ನಿಮ್ಮ ಔದಾರ್ಯ ಧರ್ಮದ ಮೇಲೆ ನಾವು ನಿಂತಿಲ್ಲ.

ನಿಲುವಳಿ ಸೂಚನೆಯ ಪ್ರಸ್ತಾಪ

ಸುಬ್ರಹ್ಮಣ್ಯನಗರ ಪೋಲೀಸ್ ಠಾಣೆಯಲ್ಲಿ ರಿಕ್ಷಾ ಡ್ರೈವರ್ ಒಬ್ಬರ ಸಾವಿನ ಬಗ್ಗೆ

೫–೦೦ ಪಿ. ಎಂ.

ಅಧ್ಯಕ್ಷರು.—ಜೂನಿಯರ್ ಲಾಯರ್ ಮೊದಲು ಪ್ರಾರಂಭಿಸಲಿ.

ಶ್ರೀಮತಿ ಕೆ. ಎಸ್, ನಾಗರತ್ನಮ್ಮ.—ಅವರೇ ಹೇಳಲಿ ಅಂದರೆ ಔದಾರ್ಯ ಆಥ ಅಲ್ಲವೆ ? ನಮಗೆ ಬೆಳಿಗ್ಗೆ ಎದ್ದು ಪೇಪರ್ ತೆಗೆದರೆ ಏನು ಸುದ್ದಿ ಬರುತ್ತದೋ ಎಂಬ ಗಾಬರಿಯಾಗುವ ಪ್ರಸಂಗ ಶುರುವಾಗಿದೆ. 'ಲಾಕ್‌ಅಪ್‌ನಲ್ಲಿ ಸಾವು' ಪೋಲೀಸರ ಅಮಾನತ್ತು' ಎಂದು ಹೆಡ್ಡಿಂಗ್‌ನಲ್ಲಿ ಬಂದಿದೆ. ಅದೇನೆಂದರೆ, ಸುಬ್ರಹ್ಮಣ್ಯನಗರ ಪೋಲೀಸ್ ಠಾಣೆಯಲ್ಲಿ ಚೆನ್ನಯ್ಯ ಅನ್ನುವವನನ್ನು ಬಂಧಿಸಲಾಗಿತ್ತು. ಅವನ ಹೇಳಿಕೆ ಪ್ರಕಾರ ತಾನು ಕಳವು ಮಾಡಿದ್ದ ೩–೪ ಆಟೋರಿಕ್ಷಾಗಳನ್ನು, ಪೋಲೀಸರು ಪತ್ತೆ ಮಾಡಿದ್ದಾರೆ. ಅವನ ಹೇಳಿಕೆ ಮೇಲೆ ಅವು ಪತ್ತೆಯಾಗಿವೆ. ಅವನನ್ನು ಠಾಣೆಯಲ್ಲಿ ಇಟ್ಟುಕೊಂಡದ್ದು ನಿಜ. ಆದರೆ ಅವನು ಸಾಯುವವರೆಗೆ ಪೋಲೀಸರು ಏನು ಮಾಡುತ್ತಿದ್ದರು ? ಒಬ್ಬ ಕೈದಿಯನ್ನು ಹೇಗೆ ಇಟ್ಟುಕೊಳ್ಳಬೇಕು ? ಅವನನ್ನು ಬಂಧಿಸಿದ ಮೇಲೆ ಅವನ ಹತ್ತಿರ ಏನೇನು ಸಾಮಾನು ಇರಬೇಕೆಂಬುದು ಗೊತ್ತಿಲ್ಲ ಎನ್ನುವ ಹಾಗೆ ಹೇಳಿದ್ದಾರೆ. ಅವನು ನೇಣು ಹಾಕಿಕೊಂಡು ಸತ್ತುಹೋಗಿದ್ದಾನೆ. ಕೈದಿ ನೇಣು ಹಾಕಿಕೊಳ್ಳಬೇಕಾದರೆ ಅವನ ಹತ್ತಿರ ಇದ್ದ ಸಾಮಾನು ಹಗ್ಗ ಅಥವಾ ಚೈನು ಅಥವಾ ದೋತಿ ಇರಬೇಕು. ಇಂಥ ಯಾವುದಾದರೂ ಸಾಮಾನು ಇರಬೇಕು. ಅದೆಲ್ಲವನ್ನು ನೋಡದೆ ಇವರು ಕುಳಿತುಕೊಂಡು ಏನು ಮಾಡುತ್ತಿದ್ದರು ? ಆಟವಾಡುತ್ತಿದ್ದರೆ ? ಜೂಜಾಡುತ್ತಿದ್ದರೆ ? ಪೋಲೀಸರು ಕುಳಿತುಕೊಂಡು ಹುಡುಗಾಟವಾಡುತ್ತಿದ್ದಾರೆಯೇ ? ಪೋಲೀಸರು ಕಳ್ಳರನ್ನು ಹಿಡಿದುಕೊಂಡು ಹೋಗಲಿ, ತನಿಖೆ ಮಾಡಲಿ. ಕಾನೂನು ಪ್ರಕಾರ ಏನು ಮಾಡಬೇಕೋ ಮಾಡಲಿ. ಕದ್ದಿರುವವನಿಗೆ ಶಿಕ್ಷೆ ಕೊಡಬೇಕಾದುದು ನ್ಯಾಯ. ಕದ್ದವನಿಗೆ ಚಾಕಲೇಟ್ ಕೊಡಿ ಎಂದು ಯಾರೂ ಹೇಳುವುದಿಲ್ಲ. ಶಿಕ್ಷೆ ಆಗಲೇಬೇಕು. ಆದರೆ ಇಲ್ಲಿ ಸತ್ತುಹೋಗಿದ್ದಾನೆ. ಅವನ ಹೆಂಡತಿ ಹೇಳುತ್ತಾಳೆ, ತನ್ನ ಗಂಡನಿಗೆ ಮಕ್ಕಳ ಮೇಲೆ ತುಂಬಾ ಜೀವ ಇತ್ತು. ಆತ್ಮಹತ್ಯೆ ಮಾಡಿಕೊಳ್ಳುವ ಮನುಷ್ಯ ಅಲ್ಲ ವೆಂದು ಹೇಳುತ್ತಾಳೆ. ಅವಳಿಗೆ ನೀನು ಬಾಯಿ ಮುಚ್ಚಿಕೋ, ನಿನಗೆ ೫ ಸಾವಿರ ರೂಪಾಯಿ ಕೊಡುತ್ತೇವೆ, ಕೆಲಸ ಕೊಡಿಸುತ್ತೇವೆಂದು ಹೇಳುತ್ತಾರೆ. ಇದೆಂತಹ ಅಮಾನುಷತನ ? ಅವನು ಆಟೋ ರಿಕ್ಷಾಗಳನ್ನು ಕದ್ದಿರಬಹುದು, ಕಳ್ಳ ಇರಬಹುದು. ಕಳ್ಳತನ ಪತ್ತೆಯಾಗಿ ಸಾಬೀತಾಗುವವರೆಗೆ ನೋಡಿಕೊಳ್ಳಬೇಕಾದುದು ಯಾರ ಜವಾಬ್ದಾರಿ ? ಯಾರು ಪೋಲೀಸ್ ಠಾಣೆಗೆ ಕರೆದುಕೊಂಡು ಹೋಗಿರುತ್ತಾರೋ ಅವರ ಕರ್ತವ್ಯ. ಅದನ್ನು ಬಿಟ್ಟು ಬೇಕಾಬಿಟ್ಟಿ ಬಿಟ್ಟು ಸಾಯಿಸಿದ್ದಾರೆಂದು, ನಮ್ಮ ಭಾವನೆ. ಹೆಂಡತಿಗೆ ಕೆಲಸ ಕೊಡಿಸುತ್ತೇವೆ, ದುಡ್ಡು ಕೊಡುತ್ತೇವೆಂದರೆ ಒಂದು ಜೀವದ ಬೆಲೆ ಎಷ್ಟು ? ಮಾಂಗಲ್ಯದ ಬೆಲೆ ಎಷ್ಟು ? ನೂರು ರೂಪಾಯಿಯೇ ? ಸಾವಿರ ರೂಪಾಯಿಯೇ ? ಲಕ್ಷ ರೂಪಾಯಿಯೇ ? ಎಷ್ಟು ಬೆಲೆ ಕೊಟ್ಟರೆ ಮಾಂಗಲ್ಯ ವಾಪಸ್ಸು ಬರುವುದಕ್ಕೆ ಸಾಧ್ಯ ? ಈ ರೀತಿ

ಅಮಾನುಷವಾಗಿ ಕೆಲಸ ಮಾಡುತ್ತಾ ಹೋದರೆ ಸರ್ಕಾರ ಎಂಬುದು ಇದೆಯೇ ಇಲ್ಲವೇ ? ಮುಖ್ಯ ಮಂತ್ರಿಗಳಿಗೆ ಎಷ್ಟು ಕೋಪ ಬರುತ್ತದೆಂದರೆ, ನಾವೇನು ನಿಮ್ಮ ಧರ್ಮದಿಂದ ಅಧಿಕಾರಕ್ಕೆ ಬಂದಿಲ್ಲ, ಜನಗಳ ಮಂಜೂಷಾಂತರ ಆರಿಸಿ ಬಂದಿದ್ದೇವೆಂದು, ಇಲ್ಲದಿರುವುದನ್ನೆಲ್ಲ ಹೇಳುತ್ತಾರೆ. ನಾವೇನು ಇಲ್ಲ ಅನ್ನುತ್ತೇವೆಯೇ ? ಇವರು ಜನರ ಮನೋಭಾಂತರ ಆರಿಸಿಕೊಂಡು ಬಂದಿದ್ದಾರೆ. ನಾವೇನು ಅವರನ್ನು ಮಂತ್ರಿ ಮಂತ್ರಿಗಳನ್ನು ಮಾಡಿಲ್ಲ. ನಿಮ್ಮ ಪಕ್ಷದವರು ಮಾಡಿದ್ದಾರೆ. ಯಾರಾದರೂ ರಾಜೀನಾಮೆ ಕೊಡಿ, ನೀವು ಈ ತರಹ ಕೆಲಸ ಮಾಡುತ್ತಿದ್ದೀರಿ ಅಂದರೆ ಕೋಪ ಬರುತ್ತದೆ. ನೀವು ಯಾರು ರಾಜೀನಾಮೆ ಕೊಡಿ ಎಂದು ಕೇಳುವುದಕ್ಕೆ ಅನ್ನುತ್ತಾರೆ. ನಾವೇನು ಅವರ ರಾಜೀನಾಮೆ ಕೇಳಲಿಲ್ಲ. ನ್ಯಾಯವಾದ ವಿಚಾರವನ್ನು ಹೇಳಿದರೆ. ನಾವು ಇರುವುದು ನಿಮಗೆ ಇಷ್ಟವಿಲ್ಲವೆಂದು ಕಾಣುತ್ತದೆ ಅನ್ನುತ್ತಾರೆ. ಪೌಲ್ಕ, ಪೌಲ್ಕ, ಪೌಲ್ಕ ಎಂದು ಜಿಗಿದು ಜಿಗಿದು ಬೀಳುತ್ತಾರಲ್ಲ. ಇದು ಪೌಲ್ಕವೇ? ಇಂಥ ಪೌಲ್ಕವನ್ನು ತೆಗೆದುಕೊಂಡು ಇರಬೇಕೇ ಎಂದರೆ ಉತ್ತರ ಇಲ್ಲ. ಹಾರಿ ಹಾರಿ ಬೀಳುತ್ತಾರೆ. ನೀವು ಯಾರು ನಮ್ಮ ರಾಜೀನಾಮೆ ಕೇಳುವುದಕ್ಕೆ ಎಂದು ಹೌಹಾರುತ್ತಾರೆ. ನಾವೇನೋ ಇಲ್ಲಿ ಕುಳಿತಿದ್ದೇವೆ. ಆದರೆ ನೀವು ಅಲ್ಲಿ ಕುಳಿತಿರುವುದು ನ್ಯಾಯವೆ ? ಇದೇನು ಸಣ್ಣ ವಿಚಾರವಲ್ಲ. ಒಬ್ಬ ಹೆಣ್ಣು ಮಗಳ ತಾಳಿಯ ವಿಚಾರ. ಇಂಥ ಪರಿಸ್ಥಿತಿಯಲ್ಲಿ ಅವರು ಯಾವ ರೀತಿ ರಾಜ್ಯಭಾರ ಮಾಡುತ್ತಿದ್ದಾರೆ ? ಆದ್ದರಿಂದ ಇದರ ಬಗ್ಗೆ ವಿವರವಾಗಿ ಚರ್ಚಿಸುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

† ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಸನ್ಮಾನ್ಯ ಅಧ್ಯಕ್ಷರೆ. ನಿಜವಾಗಿಯೂ ಅಡ್ಜರ್ನ್‌ಮೆಂಟ್ ಮೋಷನ್ ಆಗಲೀ ಅಥವಾ ಇನ್ನಿತರ ಮಹತ್ವದ ವಿಷಯಗಳಾಗಲೀ ಬಂದಾಗ ಸದನದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಇರಬೇಕಾಗಿತ್ತು. ಮುಂಜಾನೆ ಇದ್ದರು. ಆದರೆ ಈಗಿಲ್ಲ. ಅಡ್ಜರ್ನ್‌ಮೆಂಟ್ ಮೋಷನ್ ಬರುತ್ತದೆ ಎಂದು ನೀವು ಅವರಿಗೆ ಇನ್‌ಫರ್ಮೇಷನ್ ಕೊಟ್ಟಿರಬೇಕು. ಸದನ ನಡೆಯುವಾಗ ಅವರು ಡೆಲ್ಲಿಗೆ, ಬೊಂಬಾಯಿಗೆ, ಅಲಹಾಬಾದಿಗೆ ಹೋಗುತ್ತಿದ್ದಾರೆ. ೭೩೦ ದಿವಸದಲ್ಲಿ ೩೧೭ ದಿವಸ ಮಾನ್ಯ ಮುಖ್ಯಮಂತ್ರಿಗಳು ಪ್ರವಾಸದಲ್ಲಿದ್ದರು ಎಂದು ಮೊನ್ನೆ ತಾವೇ ಉತ್ತರ ಕೊಡಿಸಿದಿರಿ. ಈಗ ಇದೂ ಸೇರಿದರೆ ೩೧೮ ದಿವಸ ಆಯಿತು.

ಅಧ್ಯಕ್ಷರು.—ನೀವು ವಿಷಯಕ್ಕೆ ಬನ್ನಿ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅವರು ಏನಾದರೂ ಉತ್ತರ ಹೇಳಬಹುದು. ಅದು ಬೇರೆ. ತಾವೇ ಖುದ್ದಾಗಿ ಶಿಷ್ಟಾಚಾರಕ್ಕೆ ಹೋಗಿ. ನೀವು ಹೋದರೆ ಗಲಭೆ ನಿಲ್ಲುತ್ತದೆ ಅಂದರೆ ಮಂತ್ರಿ ಮಂತ್ರಿಗಳು ಹೋಗಲಿಲ್ಲ. ಅದಕ್ಕೆ ಅವರಿಗೆ ಸಮಯ ಇರುವುದಿಲ್ಲ. ಡೆಲ್ಲಿಗೆ ಹೋಗುವುದಕ್ಕೆ ಸಮಯ ಇದೆಯಾ ? ಶಿಷ್ಟಾಚಾರ ಇಲ್ಲಿಂದ ಕೇವಲ ೪೦ ಕಿಲೋಮೀಟರ್ಸ್ ಇದೆ. ಅಲ್ಲಿಗೆ ಹೋಗುವುದಕ್ಕೆ ಟೈಮಿಲ್ಲ.

ಅಧ್ಯಕ್ಷರು.—ಸಬ್ಜೆಕ್ಟ್‌ಗೆ ಬನ್ನಿ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಸಬ್ಜೆಕ್ಟ್ ಅಂದರೆ ಏನು ? ಉತ್ತರ ಕೊಡುವುದಕ್ಕೆ ಅವರಿರಬೇಕೋ ಬೇಡವೊ ?

ಅಧ್ಯಕ್ಷರು.—ಮಂತ್ರಿಗಳಿಗೆ ಜಾಯಿಂಟ್ ರೆಸ್ಪಾನ್ಸಿಬಿಲಿಟಿ ಇದೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅವರು ಒಂದಾದರೂ ಮಾಡಲಿ. ಅವರ ಪಾರ್ಟಿಯಲ್ಲಿ ಆಕ್ಟಿಂಗ್ ಪ್ರೆಸಿಡೆಂಟ್ ಎಂದು ಅಜಿತ್ ಸಿಂಗ್ ಅವರನ್ನು ಮಾಡಿಕೊಂಡಿದ್ದಾರಲ್ಲ ಆ ರೀತಿ ಆಕ್ಟಿಂಗ್ ಚೀಫ್ ಮಿನಿಸ್ಟರ್ ಎಂದು ಬೊಮ್ಮಾಯಿಯವರನ್ನೋ ರಾಚಯ್ಯನವರನ್ನೋ ಮಾಡಿಕೊಳ್ಳಲಿ.

ಶ್ರೀ ಎಸ್.ಆರ್. ಬೊಮ್ಮಾಯಿ.—ವರ್ಕಿಂಗ್ ಪ್ರೆಸಿಡೆಂಟ್ ನಮ್ಮ ಪಾರ್ಟಿಯಲ್ಲಿ ಮಾತ್ರ ಇಲ್ಲ. ನಿಮ್ಮ ಪಾರ್ಟಿಯಲ್ಲೂ ಇದ್ದಾರೆ. ಎಲ್ಲ ಕಡೆ ಇದ್ದಾರೆ.

---

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ದೀಜೀರೊ ಮತ್ತು ಡೀಫ್ಯಾಕ್ಟೊ ಎಂದು ಮಾಡಿದ್ದಾರೆ. ಅದೇ ರೀತಿ ರಾಚಯ್ಯನವರನ್ನು ಮಾಡಲಿ. ಅವರು ಈಗ ನಂಬರ್ ೨ ರಲ್ಲಿದ್ದಾರೆ. ನಂಬರ್ ಒಂಭತ್ತಕ್ಕೆ ಬರುವುದಕ್ಕೆ ಸುಲಭವಾಗುತ್ತದೆ. ಈ ವಿಚಾರ ಚರ್ಚೆಗೆ ಬರುತ್ತದೆಂದು ಗೊತ್ತಿದ್ದರೂ ಕೂಡ ಈ ಸದನವನ್ನು ಬಿಟ್ಟು ಹೋಗತಕ್ಕ ಅವಶ್ಯಕತೆ ಮುಖ್ಯಮಂತ್ರಿಗಳಿಗೆ ಏನಿತ್ತು ? ಪ್ರವಾಸ ಹೋಗುವುದಕ್ಕೂ ಒಂದು ಮಿತಿ ಇಲ್ಲವೇ ? ೭೧೨ ದಿವಸದಲ್ಲಿ ೩೧೨ ದಿವಸ ಓಡಾಡುವುದು ಎಂದರೆ ಏನು ?

ಶ್ರೀ ಬಸವರಾಜ ಪಾಟೀಲ್ ಅನ್ವರಿ.—ನಮಗೂ ಗೊತ್ತಿದೆ ಅದು.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಏನೂ ಗೊತ್ತಿಲ್ಲ ನಿಮಗೆ ಕೂಳಿತಂಕೊಳ್ಳಿ ಇಲ್ಲ ಅಂದರೆ ಮುಖ್ಯಮಂತ್ರಿಗಳನ್ನು ಕರೆದುಕೊಂಡು ಬನ್ನಿ. ಇಲ್ಲದಿದ್ದರೆ ದೇಶದ ತುಂಬಾ ಅಡ್ಡಾಡುವುದಕ್ಕೆ ಕಳುಹಿಸಿರಿ.

MR. SPEAKER.—Please be brief.

SHRI M. MALLIKARJUNA KHARGE.—This is a serious matter let him do his politics at his own cost, not at the cost of the legislature or the people of the state ರಾಜಕೀಯ ಬೇರೆ ಕಡೆ ಮಾಡಲಿ.

ಅಧ್ಯಕ್ಷರು.—ನೀವು ಸಬ್ಜೆಕ್ಟ್ ಬಿಟ್ಟು ರಾಜಕೀಯ ಭಾಷಣ ಮಾಡುವುದಕ್ಕೆ ಶುರು ಮಾಡಿದಿರಿ.

ಶ್ರೀ ಎ. ಲಕ್ಷ್ಮೀಸಾಗರ್.—ವಿಷಯ ಪ್ರಸ್ತಾಪ ಮಾಡುವುದನ್ನು ಬಿಟ್ಟು ಯಾವಯಾವುದೋ ರಾಜಕೀಯದ ವಿಷಯದ ಮಾತನಾಡುತ್ತಿದ್ದಾರೆ. ದಿವಕ್ಕೆ ೧೦೦ ಅಡ್ವರ್ಟೈಸ್‌ಮೆಂಟ್ ಪೋಷನ್ ಕಳುಹಿಸುತ್ತಾರೆ. ಅವರಿಗೆ ಇನ್ನೇನೂ ಬಂಡವಾಳ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ನಿಮ್ಮ ಬಂಡವಾಳ ಗೊತ್ತಾಗುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.—ಗೊತ್ತಾಗಿದೆ. ಬಂಡವಾಳದ ಪ್ರಶ್ನೆ ಏತಕ್ಕೆ ? ವಿಷಯ ಪ್ರಸ್ತಾಪ ಮಾಡಿ.

ಅಧ್ಯಕ್ಷರು— ಅಡ್ವರ್ಟೈಸ್‌ಮೆಂಟ್ ಪೋಷನ್ ಕೊಟ್ಟಿದ್ದೀರಿ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಸೆಷನ್ ನಡೆಯುವಾಗ ಅವರು ಇರಬೇಕೋ ಬೇಡವೋ ಹೇಳಿ.

ಅಧ್ಯಕ್ಷರು.—ನಾವೂ ಮಂತ್ರಿಯಾಗಿದ್ದೆವು. ನೀವೂ ಮಂತ್ರಿಯಾಗಿದ್ದಿರಿ. ಯಾವ ರೀತಿಯಿಂದ ಸರ್ಕಾರ ನಡೆಸುತ್ತಿದ್ದೆವು ಎಂಬುದು ನಿಮಗೂ ಗೊತ್ತಿದೆ. ಜಾಯಿಂಟ್ ರೆಸ್ಪಾನ್ಸಿಬಿಲಿಟಿ ಇದೆ. ಇವತ್ತು ಬರುವುದಕ್ಕಾಗುವುದಿಲ್ಲ ಎಂದು ಅವರು ಹೇಳಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಎರಡು ವರ್ಷದಲ್ಲಿ ಒಂದು ವರ್ಷ ಟೂರು ಅಂದರೆ ?

ಅಧ್ಯಕ್ಷರು.—ನಾನಂ ಊರಿನಲ್ಲಿರುವುದಿಲ್ಲ, ಆದ್ದರಿಂದ ಸೆಷನ್‌ಗೆ ಬರುವುದಕ್ಕಾಗುವುದಿಲ್ಲ, ನನ್ನ ಪರವಾಗಿ ಲಾ ಮಿನಿಸ್ಟರ್ ಅಥವಾ ಬೊಮ್ಮಾಯಿಯವರು ಉತ್ತರ ಹೇಳುತ್ತಾರೆ ಎಂದು ಮುಖ್ಯ ಮಂತ್ರಿಗಳು ನನಗೆ ಪತ್ರ ಬರೆದಿದ್ದಾರೆ. ನೀವು ವಿಷಯಾಂತರ ಮಾಡಬೇಡಿ. ವಿಷಯಕ್ಕೆ ಬನ್ನಿ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಶ್ರೀಮಾನ್ ಚಿನ್ನಯ್ಯ ಎಂಬ ಕ್ಯಾತಮಾರ್ನಳ್ಳಿಯ ೪೦ ವರ್ಷ ವಯಸ್ಸಿನ ಒಬ್ಬ ಮನುಷ್ಯ, ಕಳ್ಳತನ ಮಾಡಿದ್ದಾನೆ ಎಂಬ ಕೆಲವು ಆಪಾದನೆಗಳ ಮೇಲೆ ಸುಮಾರು ೧೧ ದಿವಸ ಪೋಲೀಸರು ತಮ್ಮ ಕಸ್ಟಡಿಯಲ್ಲಿ ಇಟ್ಟುಕೊಂಡಿದ್ದರೆಂಬ ವರ್ತಮಾನ ನಮಗೆ ಬಂದಿದೆ. ಅದರಲ್ಲೂ ವಿಶೇಷವಾಗಿ ಆತ ಆಟೋ ಸ್ಪೇರ್‌ಪಾರ್ಟ್ಸ್, ಹಾಗೂ ಬೇರೆ ಸಾಮಾನುಗಳನ್ನು ಕೂಡ ಕಳ್ಳತನ ಮಾಡುತ್ತಿದ್ದ ಎಂಬ ಮಾತೂ ಸಹ ವರದಿಯಾಗಿದೆ. ಅವರ ಮನೆಯವರಾದ ಶ್ರೀಮತಿ ಪಾರ್ವತಿ ಅವರು ಅವರ ತಾಯಿ ಗೌರಮ್ಮ ತಂಗಿ ಜಯಲಕ್ಷ್ಮಿ, ಇವರು ಏನಂ ಆಪಾದನೆ ಮಾಡಿದ್ದಾರೆಂದರೆ, ಇವರು ಕಳ್ಳತನ ಮಾಡುತ್ತಿದ್ದರು. ಇದಕ್ಕೆ ಪೋಲೀಸ್‌ನವರ ಕುಮ್ಮಕ್ಕು ಇತ್ತು. ಸುಮಾರು ಒಂದು ಲಕ್ಷ ರೂಪಾಯಿಗಳ ಸಾಮಾನನ್ನು ಕಳ್ಳತನ ಮಾಡಿಕೊಂಡು ಬಂದರೆ ಇಂತಿಷ್ಟು ಅಂತ ಕೊಡಬೇಕಾಗಿತ್ತು. ಆದರೆ ಅಂತಹ ಸಾಮಾನನ್ನು ತೆಗೆದುಕೊಂಡು ಅವರಿಗೆ ಹೊಡೆದಿದ್ದಾರೆ ಎನ್ನತಕ್ಕ ಆಪಾದನೆ ಮಾಡಿದ್ದಾರೆ ಎಂಬುದಾಗಿ ಹೇಳಿದ್ದಾರೆ. ಇದನ್ನು ತಾವೂ ಕೂಡ

ನೋಡಿರಬಹುದು. ಅಂದರೆ ಪೋಲೀಸ್‌ನವರು ಇವರ ಜೊತೆ ಶಾಮೀಲಾಗಿದ್ದರು ಎನ್ನುತಕ್ಕ ಮಾತು ಹೊರಗಡೆ ಕೇಳಿ ಬರುತ್ತದೆ. ಪೋಲೀಸ್ ಠಾಣೆಯಲ್ಲಿ ೫–೩೦ ಗಂಟೆಗೆ ಬೆಡ್‌ಷೀಟ್ ನಿಂದ ನೇಣುಹಾಕಿಕೊಂಡು ಸತ್ತಿದ್ದಾನೆ ಅಂತ ಪೋಲೀಸ್‌ನವರು ಹೇಳಿದ್ದಾರೆ. ತಮಗೆ ಗೊತ್ತಿದ್ದ ಹಾಗೆ ಪೋಲೀಸ್ ಸ್ಟೇಷನ್ ವಿಧಾನ ಸೌಧದ ಹಾಗೆ ಇಲ್ಲ. ಸುಮಾರು ೫೦೦ ಅಡಿ ಉದ್ದ ೨೦೦ ಅಡಿ ಅಗಲವೂ ಇಲ್ಲ. ೧೦೦ ಅಡಿಯೂ ಕೂಡ ಇಲ್ಲ. ಹೆಚ್ಚು ಅಂದರೆ ಎರಡು ರೂಮುಗಳು ಇರುತ್ತವೆ. ಅಂತಹದ್ದರಲ್ಲಿ ಒಂದು ರೂಮಿನಲ್ಲಿ ನೇಣು ಹಾಕಿಕೊಂಡಾಗ ಸಾಮಾನ್ಯವಾಗಿ ಚೀರಿಯೇ ಚೀರುತ್ತಾರೆ. ಅಂದರೆ ಅಲ್ಲಿದ್ದಂತಹ ಪೋಲೀಸ್‌ನವರಿಗೆ ಗೊತ್ತಾಗದ ರೀತಿಯಲ್ಲಿ ಯಾವ ರೀತಿ ನೇಣುಹಾಕಿಕೊಂಡ ಎಂಬ ವಿಚಾರದ ಜೊತೆಗೆ ಇನ್ನೂ ಅನೇಕ ವಿಷಯಗಳು ಇಲ್ಲಿ ಹೊರಗಡೆ ಬರುತ್ತವೆ. ಪೋಲೀಸ್‌ನವರೇ ನೇರವಾಗಿ ಅವನನ್ನು ಹೊಡೆದು ಬಡಿದ ಕಾರಣದಿಂದ ಆತ ಸತ್ತ ಮೇಲೆ, ನೇಣು ಹಾಕಿಕೊಂಡಿದ್ದಂತಹ ಸಂದರ್ಭದಲ್ಲಿ ವಿಕ್ಟೋರಿಯಾ ಆಸ್ಪತ್ರೆಗೆ ಒಯ್ಯುತಕ್ಕ ಸಂದರ್ಭದಲ್ಲಿ ಸತ್ತ ಎಂಬುದಾಗಿ ಹೇಳಿದ್ದಾರೆ. ಹಿಂದೆ ಅವರ ಮನೆಯವರೂ ಕೂಡ ಕೇಳಿದಾಗ ಮನೆಯವರಿಗೆ ಪೋಲೀಸ್‌ನವರು ನಾವು ಹುಡುಕುತ್ತಿದ್ದೇವೆ. ಅವನು ಸಿಕ್ಕ ತಕ್ಷಣ ನಿಮಗೆ ಇನ್‌ಫಾರ್ಮ್ ಮಾಡುತ್ತೇವೆಂದು ಹೇಳಿದ್ದರು. ನಂತರ ಅವನ ಸತ್ತ ಮೇಲೆ ಮನೆಯವರ ಹತ್ತಿರ ಹೋಗಿ ಅವನಿಗೆ ಪೆಟ್ಟು ನೋವು ಇತ್ತು. ವಿಕ್ಟೋರಿಯಾ ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ದಾರಿಯಲ್ಲಿ ತೀರಿಕೊಂಡ ಅಂತ ಹೇಳಿದ್ದಾರೆ. ಇನ್ನೊಂದು ಸಾರಿ ಅವರ ಮನೆಗೆ ಹೋಗಿ ಪೋಲೀಸ್ ಠಾಣೆಯಲ್ಲೇ ನೇಣು ಹಾಕಿಕೊಂಡು ಸತ್ತು ಹೋಗಿದ್ದಾನೆ ಅಂತ ಹೇಳಿದ್ದಾರೆ. ಇದರಿಂದಾಗಿ ಅನೇಕ ವಿಷಯಗಳಲ್ಲಿ ಸಂಶಯ ಬರತಕ್ಕ ರೀತಿಯಲ್ಲಿ ಇದು ನಡೆದಿದೆ. ಇದೊಂದು ಮರ್ಡರ್. Actually it is a murder in lock up in Police Station. ಇದೇ ರೀತಿ ರಶೀದ್ ಕೇಸ್ ಕೂಡ ಆಗಿದ್ದು. ಆದರೆ ಯಾರ ಮೇಲಿಯೋ ಹಾಕಿಬಿಡುವುದು. ಯಾವ ಒಬ್ಬ ಮನುಷ್ಯ ಆದರಲ್ಲೂ ತರುಣ ಅನೇಕ ಕಳ್ಳತನ ಮಾಡಿದ್ದಂತಹವನ ಜೊತೆ ಪೋಲೀಸ್‌ನವರೂ ಕೂಡ ಶಾಮೀಲಾಗಿದ್ದು. ಆತ ನೇಣು ಹಾಕಿಕೊಳ್ಳತಕ್ಕ ಪ್ರಸಂಗ ಏಕೆ ಬಂತು ? ಅಥವಾ ಅವನು ನೇಣು ಹಾಕಿಕೊಂಡಿದ್ದು, ಅಲ್ಲಿದ್ದಂತಹ ಪೋಲೀಸ್‌ನವರಿಗೆ ಏಕೆ ಗೊತ್ತಾಗಲಿಲ್ಲ ? ಈ ಎಲ್ಲ ವಿಚಾರಗಳನ್ನು ಹೇಳಬೇಕಾಗಿದೆ. ಮತ್ತೆ ಇವತ್ತು ಪೋಲೀಸ್‌ನವರು ಏನು ಹೇಳಿದ್ದಾರೆಂದರೆ ಮೆಜಿಸ್ಟೀರಿಯಲ್ ಎನ್‌ಕ್ವೈರಿ ಆಗಬೇಕೆಂದು ಹೇಳಿದ್ದಾರೆ. ಜೊತೆಗೆ ಎಸ್.ಐ.ಟಿ.ಸಿ.....

ಅಧ್ಯಕ್ಷರು.—ಎಕ್ಸ್, ವೈ. ಜಡ್. ಅಂತ ಹೇಳಿ. ಅವರ ಹೆಸರು ಏಕೆ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಎಕ್ಸ್. ವೈ. ಏಕೆ? ಅವರ ಹೆಸರನ್ನೇ ಹೇಳುತ್ತೇನೆ. ಜಿ. ಸಿದ್ದಲಿಂಗಯ್ಯ ಸಬ್–ಇನ್ಸ್‌ಪೆಕ್ಟರ್, ಬಾಲಾಚಾರಿ, ಹೆಡ್–ಕಾನ್‌ಸ್ಟೇಬಲ್ ಹಾಗೂ ಕಾನ್‌ಸ್ಟೇಬಲ್ ಕುಮಾರಸ್ವಾಮಿ ಈ ಮೂರು ಜನರನ್ನು ಸಸ್‌ಪೆಂಡ್ ಮಾಡಿದ್ದಾರೆ. ಇದರಿಂದ ನಾನು ಹೇಳತಕ್ಕಂಥದ್ದು ಇಷ್ಟೆ. ಈ ರೀತಿ ಯಾದ ಮರ್ಡರ್ ಇದೊಂದೆ ಕಡೆ ನಡೆಯುತ್ತಿಲ್ಲ. ಇದೇ ರೀತಿಯಾದ ಮರ್ಡರ್ ಆಳಂದ್ ತಾಲ್ಲೂಕಿನಲ್ಲಿ ಆಗಿದೆ. ಮೊನ್ನೆ ನಮ್ಮ ಜೆ. ಎಸ್. ಆಚಾರ್ ರವರ ಕ್ಷೇತ್ರವಾದ ಬೈಂದೂರಿನಲ್ಲಿ ಆಗಿದೆ. ಆದರೂ ಸರ್ಕಾರ ಇಂತಹ ಘಟನೆಗಳು ನಡೆದಾಗ ನಮ್ಮ ಪೋಲೀಸ್‌ನವರು ಬಹಳ ಸಂಭಾವಿತರು ಇದ್ದಾರೆ. ಎಸ್.ಐ. ಇದರಲ್ಲಿ ಇನ್ವಾಲ್ ಆಗಿಯೇ ಇಲ್ಲವೆಂದು ಸರ್ಕಾರದವರೇ ಮೊದಲು ಡಿಫೆಂಡ್ ಮಾಡುತ್ತಾರೆ. ನಾವು ಪೋಲೀಸ್‌ನವರನ್ನು ಕೆಟ್ಟವರೆಂದು ಹೇಳುತ್ತಿಲ್ಲ, ಎಲ್ಲರೂ ಇದೇ ರೀತಿಯ ತಪ್ಪು ಮಾಡಂತ್ತಾರೆಂದೂ ಕೂಡ ಹೇಳುತ್ತಿಲ್ಲ. ಅವರು ಎಲ್ಲೆಲ್ಲಿ ತಪ್ಪು ಮಾಡುತ್ತಾರೆ, ಅಂತಹವರ ಬಗ್ಗೆ ತಕ್ಷಣವೇ ಶಿಕ್ಷೆ ಕೊಡದಿದ್ದರೆ, ಅವರಿಗೆ ನೌಕರಿಯಿಂದ ಡಿಸ್‌ಮಿಸ್ ಮಾಡದಿದ್ದರೆ ಇಂತಹ ಘಟನೆಗಳು ನಡೆಯುತ್ತಲೇ ಇರುತ್ತವೆ. ಇಂತಹ ಘಟನೆಗಳು ಏಕೆ ನಡೆಯುತ್ತಿವೆ ಎಂದರೆ, ಒಂದು, ಸರ್ಕಾರದ ಕುಮ್ಮಕ್ಕಾದರೂ ಇರಬೇಕು ಇಲ್ಲ, ಇನ್ನೊಂದು ಕಡೆ ನಮಗೇನು ಏನು ಮಾಡಿದರೂ ನಡೆಯುತ್ತದೆ, ಅಂತ ಕೇರ್‌ಲೆಸ್‌ನೆಸ್ ಆಗಿ ಇರಬಹುದು. ಅವರೇ ಮಾಡಿರಬಹುದು. ಇಲ್ಲ ಸರ್ಕಾರದ ಕುಮ್ಮಕ್ಕಾದರೂ ಇರಬೇಕು. ಈ ಎರಡರಲ್ಲಿ ಒಂದಾದರೂ ಆಗಿರಬೇಕಲ್ಲ. ನೀವು ಪೋಲೀಸರನ್ನು ಸರಿಯಾದ ಹಿಡಿತದಲ್ಲಿ ಇಟ್ಟುಕೊಂಡಿದ್ದರೆ, ಅವರನ್ನು ಯಾವ ರೀತಿ ನಡೆಸಬೇಕೋ ಆ ರೀತಿ ನಡೆಸಿಕೊಂಡಿದ್ದರೆ ಖಂಡಿತಾ ಇಂತಹ ಘಟನೆ ಆಗುತ್ತಾ ಇರಲಿಲ್ಲ. ಹಿಂದೆ ಇಂತಹವು ಆಗಿರಬಹುದು. ಆದರೆ ಈಗ ಹೆಚ್ಚಿನ ರೀತಿಯಲ್ಲಿ ಆಗುತ್ತಾ ಇವೆಯೆಲ್ಲಾ ಏಕೆ? ಇದಕ್ಕೆ ಯಾರು ಕಾರಣರು? ಆದ್ದರಿಂದ ನಾನು ಹೇಳುತ್ತಿದ್ದೇನೆ, ಇದಕ್ಕೆ ಜ್ಯುಡಿಷಿಯಲ್ ಪ್ರೋಬ್ ಆಗಬೇಕು ಇಲ್ಲವೇ ಸೆಷನ್ಸ್ ಜಡ್ಜ್ ಅಥವಾ ಡಿಸ್ಟ್ರಿಕ್ಟ್ ಜಡ್ಜ್ ಕಡೆಯಿಂದ

ತನಿಖೆ ಆಗಬೇಕು. ಇದಕ್ಕೆ ಮ್ಯಾಜಿಸ್ಟೀರಿಯಲ್ ಎನ್‌ಕ್ವಯರಿ ಸಾಕಾಗುವುದಿಲ್ಲ. ಇಂತಹ ನಾಲ್ಕು ಸಾವುಗಳು ಆಗಿವೆ ಎಂದು ಮಾನ್ಯ ಮುಖ್ಯಮಂತ್ರಿಗಳು ಈ ಹಿಂದೆ ಹೇಳಿದರು. ಇದು ಐದನೆಯದು. ಪೋಲೀಸರೂ ಕಳ್ಳರ ಜೊತೆ ಶಾಮೀಲು ಇದ್ದರೆ ಗತಿ ಏನು? ಇದೇ ರೀತಿ ಶಾಮೀಲಿನಲ್ಲಿ ಅನೇಕ ಡಕಾಯಿತಿಗಳು, ರಾಬರಿಗಳು ನಡೆದಿವೆ ಎನ್ನುವ ಭಾವನೆ ಜನರಲ್ಲಿ ಬರುತ್ತದೆ. ಆದ್ದರಿಂದ ಇದರ ಮೇಲೆ ಸಂಪೂರ್ಣ ಚರ್ಚೆ ಮಾಡಲಿಕ್ಕೆ ಅವಕಾಶ ಮಾಡಿಕೊಡಬೇಕು. ಮತ್ತು ಇನ್ನೂ ಬೇರೆಯವರೂ ಕೂಡಾ ಅವರ ಬಗ್ಗೆ ಹೇಳಲಿದ್ದಾರೆ. ಎಲ್ಲವನ್ನು ಇಲ್ಲಿ ಪ್ರಸ್ತಾಪ ಮಾಡಬೇಕಾಗುತ್ತದೆ. ಆದ್ದರಿಂದ ತಾವು ನಿಲುವಳಿ ಸೂಚನೆಗೆ ಒಪ್ಪಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ ವೀರಪ್ಪ ಮೊಯ್ಲಿ (ಕಾರ್ಕಳ).—ಸನ್ಮಾನ್ಯ ಅಧ್ಯಕ್ಷರೇ, ನಿನ್ನೆಯ ದಿವಸ ಸಂಬ್ರಹ್ಮಣ್ಯಂನಗರದ ಪೋಲೀಸ್ ಠಾಣೆಯಲ್ಲಿ ನಡೆದ ಘಟನೆ ಬಗ್ಗೆ ನಮ್ಮ ನಾಯಕರು ನಿಲುವಳಿ ಸೂಚನೆಯನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ತಮ್ಮ ಅನುಮತಿಯನ್ನು ಪಡೆಯಲು ಕೆಲವು ವಿಚಾರಗಳನ್ನು ನಾನು ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ ಈ ಘಟನೆ ಬಗ್ಗೆ ಪೋಲೀಸರೂ ಹೇಳಿಕೆ ಕೊಟ್ಟಿದ್ದಾರೆ. ಬಹುಶಃ ಪೋಲೀಸ್ ಕಮಿಷನರ್‌ರವರ ಕಛೇರಿಯಿಂದ ನಿನ್ನೆ ಸಂಜೆ ಹೇಳಿಕೆ ಬಂದಿದೆ. ಹೊಟ್ಟೆ ನೋವು ಇದ್ದ ಚೆನ್ನಯ್ಯನವರು ನೇಣುಹಾಕಿಕೊಂಡು ಸತ್ತಿದ್ದಾರೆಂದು ಹೇಳಿ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ ಇದು ಅಷ್ಟು ಸುಲಭವಾಗಿ ಬಗೆಹರಿಯತಕ್ಕ ಪ್ರಶ್ನೆ ಅಲ್ಲ. ಈಗ ನಮ್ಮ ಸಚಿವರೂ ಇವತ್ತು ಹೇಳುವ ಉತ್ತರದಲ್ಲಿ ನಾವು ಬಹಳ ಕ್ಷಿಪ್ರವಾಗಿ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ, ಆ ಠಾಣೆಗೆ ಸಂಬಂಧಪಟ್ಟ ಸಬ್-ಇನ್ಸ್‌ಪೆಕ್ಟರನ್ನು ಮತ್ತು ಇದಕ್ಕೆ ಸಂಬಂಧಪಟ್ಟ ಕಾನ್ಸ್‌ಟೇಬಲ್ಸ್ ಗಳನ್ನೋ ಆಥವಾ ಪೆಡ್ ಕಾನ್‌ಸ್ಟೇಬಲ್ ಅನ್ನೋ ಅಮಾನತ್ತಿನಲ್ಲಿ ಇಟ್ಟಿದ್ದೇವೆಂದು ಹೇಳಬಹುದು. ಬಹುಶಃ ಅಮಾನತ್ತಿನಲ್ಲಿ ಇಟ್ಟಮೇಲೆ ಸರ್ಕಾರದ ಜವಾಬ್ದಾರಿ ಮುಗಿಯಿತು ಎಂದು ಒಂದು ರೀತಿಯ ಅಭಿಪ್ರಾಯ ಅವರ ಹೇಳಿಕೆಯಿಂದ ನಮಗೆ ಗೊತ್ತಾಗುತ್ತದೆ. ಈ ಪ್ರಶ್ನೆ ಬಹಳ ಗಂಭೀರವಾಗಿದೆ. ಏಕೆಂದರೆ ಚಿನ್ನಯ್ಯನವರ ಹೆಣವನ್ನು ಹರಿಶ್ಚಂದ್ರ ಘಾಟ್‌ಗೆ ನೇರವಾಗಿ ವಿಕ್ಟೋರಿಯಾ ಆಸ್ಪತ್ರೆಯಿಂದ ತಂದಮೇಲೆ ನಮ್ಮ ಮನೆಗೆ ಅವರ ಸಂಬಂಧೀಕರು ಹಾಗೂ ಅವರಿಗೆ ಬೇಕಾದವರು ಕೆಲವರು ನಮ್ಮ ಮನೆಗೆ ಬಂದಿದ್ದರು. ಆಗ ನಾನು ಮನೆಯಲ್ಲಿ ಇರಲಿಲ್ಲ. ನಾನು ರಾತ್ರಿ ಮನೆಗೆ ಬಂದಮೇಲೆ ಅವರು ಪುನಃ ಬಂದರು. ಅವರು ಹೇಳಿದ್ದನ್ನು ಕೇಳಿ ನಾನೂ ಕೂಡಾ ಹರಿಶ್ಚಂದ್ರಘಾಟ್‌ಗೆ ಹೋಗಿ ನೋಡಿದೆ. ಏಕೆಂದರೆ ಪತ್ರಿಕೆಗಳಲ್ಲಿ ಈ ವಿಚಾರ ಬಂದಿದೆ. ನಾನು ಸ್ವತಃ ಅಲ್ಲಿಗೆ ಹೋಗಿ ಕೆಲವು ವಿಚಾರಗಳನ್ನು ನಾನು ತಿಳಿದುಕೊಂಡಿದ್ದೇನೆ. ಆ ಚೆನ್ನಯ್ಯ ಎನ್ನುವವರು ಆಟೋರಿಕ್ಷಾ ಡ್ರೈವರ್ ಆಗಿದ್ದವರು. ಅವರನ್ನು ೧೨ನೇ ತಾರೀಖು ೬ ಗಂಟೆಗೆ ಲಾಕಪ್ ಕಸ್ಟಡಿಗೆ ತೆಗೆದುಕೊಂಡಿದ್ದಾರೆ. He was arrested at Gayithrinagar. Within 24 hours, he has to be produced before a Magistrate i.e., Judicial Magistrate. ಆದರೆ ಅದು ಏನೂ ಅವರು ಮಾಡಿಲ್ಲ. ಈ ವಿಷಯದ ಬಗ್ಗೆ ನಾನು ತಿಳಿದುಕೊಂಡಹಾಗೆ ೪ ರಿಕ್ಷಾಗಳನ್ನು ಕದ್ದಿದ್ದಾರೆಂದು ಅವರ ಮೇಲೆ ಆಪಾದನೆ ಇದೆ. ಇದರಲ್ಲಿ ಒಂದು ರಿಕ್ಷಾ ಸಂಬ್ರಹ್ಮಣ್ಯ ನಗರ ಪೋಲೀಸ್ ಠಾಣೆಯ ವ್ಯಾಪ್ತಿಗೆ ಸೇರಿದ್ದು. ಉಳಿದ ೩ ರಿಕ್ಷಾಗಳು ಬೇರೆ ಠಾಣೆ ವ್ಯಾಪ್ತಿಗೆ ಸೇರಿದವು ಎಂದಮೇಲೆ ಬೇರೆ ಠಾಣೆಗಳಲ್ಲಿ ಅವುಗಳ ಬಗ್ಗೆ ಕೇಸ್ ರಿಜಿಸ್ಟರ್ ಆಗಿರಬೇಕಲ್ಲವೇ? ದಯಮಾಡಿ ಇದನ್ನು ತಾವು ಹೇಳಬೇಕು. ನಾಲ್ಕು ರಿಕ್ಷಾಗಳನ್ನು ಕದ್ದ ಆಪಾದನೆ ಇದ್ದರೆ, ಬೇರೆ ಪೂರಾ ಕೇಸುಗಳು ರಿಜಿಸ್ಟರ್ ಆದ ದಾಖಲೆ ಇದ್ದೇ ಇರಬೇಕು. ಇದರಿಂದ ನಾವು ಏನು ತಿಳಿದುಕೊಳ್ಳಬೇಕಾಗುತ್ತದೆಂದರೆ. ಒಂದು ಕಳುವಿನ ಕೇಸ್‌ನಲ್ಲಿ ಒಬ್ಬ ಆಪಾದಿತನನ್ನು ಬೆದರಿಬೊಂಬೆಯನ್ನಾಗಿ ಮಾಡಿಕೊಂಡು ಆತನನ್ನು ತೋರಿಸಿ ಯಾವರೀತಿಯಲ್ಲಿ ಪೋಲೀಸ್ ಇಲಾಖೆಯಲ್ಲಿ ಕೆಲವರು ಬ್ಲಾಕ್‌ಮೇಲ್ ಮಾಡುತ್ತಿದ್ದಾರೆ ಎನ್ನುವುದಕ್ಕೆ ಇದೊಂದು ಜೀವಂತ ನಿದರ್ಶನ. ಈ ಮನುಷ್ಯನನ್ನು ಕರೆದುಕೊಂಡು ಹೋಗಬೇಕು he is the receiver of the property ಎಂದು ಹೇಳಿ, threaten ಮಾಡಿ As many as 47,000 Rupees has been collected from various parties. ಇವನ ಜೊತೆಯಲ್ಲಿ ನಿಮ್ಮನ್ನೂ ಒಳಗೆ ಹಾಕುತ್ತೇವೆಂದು ಹೇಳಿ, they have collected the amount. ಇದಕ್ಕೆ ಸಂಬಂಧಪಟ್ಟ ಠಾಣೆ ಮಾತ್ರವಲ್ಲ ಬೇರೆ ಠಾಣೆಗಳಿಗೆ ಸಂಬಂಧಪಟ್ಟ ಏರಿಯಾಗಳಲ್ಲಿ ಸುಬ್ರಮಣ್ಯನಗರ ಪೋಲೀಸ್ ಸ್ಟೇಷನ್‌ರವರು ವಸೂಲಿ ಮಾಡಿದ್ದಾರೆ. ಯಾರ ಹತ್ತಿರ ವಸೂಲಿ ಮಾಡಿದ್ದಾರೆಂದರೆ they are prepared to depose before the judicial commission if you are going to appoint one ಇವರ

ಜೊತೆಯಲ್ಲಿ ಬೇರೆಯವರನ್ನು ಅರೆಸ್ಟ್ ಮಾಡಿದ್ದಾರೆ. ಇದೇ ತಾರೀಖಿನಲ್ಲಿ ಇದೇ ಸಂದರ್ಭದಲ್ಲಿ ಅರೆಸ್ಟ್ ಮಾಡಿದ್ದಾರೆ. ಚೆನ್ನಯ್ಯ ಎಂಬುವರು ಸಿಗಲಿಲ್ಲವೆಂದು ಹೇಳಿ ೧೦ ದಿವಸಗಳ ಹಿಂದೆ ಅವರ ತಂದೆ ಜವರೇಗೌಡ ಅವರನ್ನು ಅರೆಸ್ಟ್ ಮಾಡಿದ್ದಾರೆ. ನಂತರ ಮಗನನ್ನು ಅರೆಸ್ಟ್ ಮಾಡಿದ್ದಾರೆ. ೧೨ನೇ ತಾರೀಖು ೬ ಗಂಟೆಗೆ ಇದು ನಡೆದಿದೆ. ೧೫ನೇ ತಾರೀಖು ಚೆನ್ನಯ್ಯನವರ ಹೆಂಡತಿ ಹೋದರೆ ಅಲ್ಲಿ ನೋಡಲಿಕ್ಕೆ ಬಿಟ್ಟಿಲ್ಲ. ೧೫ನೇ ತಾರೀಖು ಒಬ್ಬರು ಕಾರ್ಪೊರೇಟರ್ ಹೋಗಿ ನೋಡಿದ್ದಾರೆ. ೧೬ನೇ ತಾರೀಖು ಒಬ್ಬ ಕಾರ್ಪೊರೇಟರ್ ಹೋಗಿ ನೋಡಿದ್ದಾರೆ, ಎಷ್ಟು ಹಿಂಸೆ ಕೊಡಬೇಕೋ ಅಷ್ಟು ಹಿಂಸೆ ಕೊಟ್ಟಿದ್ದಾರೆ. They were blackmailing many parties using this accused. The accused has been used as an instrument to blackmail and to collect money. This was going on right from 12th till 16th. They went on using this man.

ಆಮೇಲೆ ೧೬ನೇ ತಾರೀಖು ಚೆನ್ನಯ್ಯನವರ ಭಾವಮೈದ ಆಹಾರ ತೆಗೆದುಕೊಂಡು ಹೋಗಿದ್ದಾರೆ. ೭ಗಂಟೆಗೆ ಗಾಯ ಅವರ ಮೈಮೇಲಿತ್ತು, ಕಾಲು ಊದಿತ್ತು. ಇದೆಲ್ಲವನ್ನು ಅವರು ನೋಡಿದ್ದಾರೆ. ಆತ ಹೊಟ್ಟೆನೋವು ಎಂದು ಆಗ ಹೇಳಿಲಿಲ್ಲ. ಹೊಟ್ಟೆನೋವಿನ ಪ್ರಶ್ನೆಯಾವಾಗ ಬಂತು? ೧೬ನೇ ತಾರೀಖಿನವರೆಗೆ ಹೊಟ್ಟೆನೋವು ಇಲ್ಲ. ೧೭ನೇ ತಾರೀಖು ಬೆಳಗಿನ ಜಾವ ೫.೪೫ಗೆ ಅಲ್ಲಿ ನೇಣು ಹಾಕಿ ಕೊಂಡಿದ್ದಾನೆಂದು ಹೇಳಿದ್ದಾರೆ. ಕಾರ್ಪೊರೇಟರು ಬಾಕಿಯವರು ಹೋಗಿ ನೋಡಿದಾಗ ಚೆನ್ನಯ್ಯನ ಮೈಮೇಲೆ ಅಂಗಿ ಕೂಡ ಇರಲಿಲ್ಲ, ಬರೀ ಕಾಚದಲ್ಲಿ ಇರಿಸಿದ್ದರಂತೆ. ಆತನಿಗೆ ಜಮಖಾನ ಕೊಟ್ಟಿದ್ದೇವೆಂದು ಹೇಳುತ್ತಾರೆ, ಪೋಲಿಸ್‌ಸ್ಟೇಷನ್‌ಗಳಲ್ಲಿ ಯಾರಾದರೂ ಖೈದಿಗಳಿಗೆ ಜಮಖಾನ ಕೊಡುತ್ತಾರೆಯೇ? ತಮಗೆ ಗೊತ್ತಿರಬಹುದು, ಉಡಿದಾರ ಕೂಡ ಹಾಕಲಿಕ್ಕೆ ಬಿಡುವುದಿಲ್ಲ. ಅಂದಮೇಲೆ ಜಮಖಾನ ಕೊಡುವುದು ನಿಜವೆ? ಜಮಖಾನವನ್ನು ಹರಿದು ನೇಣುಹಾಕಿಕೊಂಡ ಎಂದು ಹೇಳುವುದು ಪೂರ್ತಿ ಕತೆ. ಇದರಲ್ಲಿ ನಮಗೆ ಸತ್ಯಾಂಶ ಗೋಚರವಾಗುವುದಿಲ್ಲ. ನಾನು ಕೇಳುತ್ತೇನೆ, ಅವರ ಮನೆ ಪೊಲೀಸ್‌ಸ್ಟೇಶನ್‌ಗೆ ಹತ್ತಿರವಿದೆ. ಸಂಬ್ರಮಣ್ಣ ನಗರ ಪೋಲಿಸ್‌ಸ್ಟೇಶನ್ ಥಿಕ್ಕಲೀ ಪಾಪ್ಯುಲೇಷನ್ ಏರಿಯಾ. ಸ್ಟೇಶನ್ ಸುತ್ತಮುತ್ತ ಮನೆಗಳಿವೆ. ಮನೆ ಹತ್ತಿರ ಸ್ಟೇಶನ್ ಇದೆ. ಚೆನ್ನಯ್ಯನವರ ಮನೆ ಕೂಡ ಸ್ಟೇಶನ್‌ಗೆ ಬಹುಶಃ ೩೦೦—೪೦೦ ಅಡಿ ದೂರ ಕೂಡ ಇಲ್ಲ.

ಇಷ್ಟು ಹತ್ತಿರದಲ್ಲಿ ಇರತಕ್ಕಂಥಾದ್ದು. ಒಂದುವೇಳೆ ನಿಜವಾಗಿ ಆತ ನೇಣುಹಾಕಿಕೊಂಡಿದ್ದರೆ, ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂದು ಹೇಳಿದರೆ ವಿಕ್ಟೋರಿಯಾ ಆಸ್ಪತ್ರೆಗೆ ಸಾಗಿಸುವ ಮೊದಲು ಕೇಳಿ ಬೇಕಿತ್ತು. You could have sent for his wife. That you did not do. ತಂದೆ ಇದ್ದರೆ ಅವರನ್ನು ಕರೆಸಬೇಕಿತ್ತು. ಅದನ್ನು ಮಾಡಲಿಲ್ಲ. ಗುಟ್ಟಾಗಿ ವಿಕ್ಟೋರಿಯಾ ಆಸ್ಪತ್ರೆಗೆ ತೆಗೆದುಕೊಂಡು ಹೋಗಿದ್ದಾರೆ. ನನಗೆ ತಿಳಿದ ಪ್ರಕಾರ ಆಸ್ಪತ್ರೆಯಲ್ಲಿ ಪೋಸ್ಟ್‌ಮಾರ್ಟಮ್ ಆಗುವ ವರೆಗೂ ಕೂಡ ಅವನ ತಂದೆಗೆ ಹೇಳಿ ಕಳಿಸಲಿಲ್ಲ, ಹೆಂಡತಿಗೆ ಸಂಬಂಧಿಕರಿಗೆ ಹೇಳಿಕಳಿಸಲಿಲ್ಲ ಪೋಸ್ಟ್ ಮಾರ್ಟಮ್ ಆದಮೇಲೆ ತಂದೆಯನ್ನು ಹುಡುಕಿಕೊಂಡು ಹೋದರು. ಅವರು ಸಣ್ಣ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದಾರೆ, ಅವರು ಮನೆಗೆ ಕರೆದುಕೊಂಡು ಹೋಗಬೇಕೆಂದು ಹೇಳಿದರೂ ಕೇಳದೆ ನೇರವಾಗಿ ಹರಿಶ್ಚಂದ್ರಘಾಟ್‌ಗೆ ತೆಗೆದುಕೊಂಡು ಹೋದರು. After the post mortem they should have delivered the body But they did not deliver the body. ಹಿರಿಯ ಅಧಿಕಾರಿಗಳು ಸ್ವಲ್ಪ ಗಾರ್ಡ್ ಮಾಡಬೇಕಾಗಿತ್ತು. ಹರಿಶ್ಚಂದ್ರ ಘಾಟ್‌ನಲ್ಲಿ ಒಂದು ರೀತಿ ವ್ಯಾಪಾರ ನಡೆಯುತ್ತಿದೆ. ಪತ್ರಿಕೆಯಲ್ಲಿ ಬಂದಿದೆ ಮತ್ತು ನನ್ನ ಹತ್ತಿರ ಕೂಡ ಹೇಳಿದ್ದರು. ಚೆನ್ನಯ್ಯನ ಹೆಂಡತಿ ಪಾರ್ವತಮ್ಮನಿಗೆ ಹಣದ ಆಮಿಷ ತೋರಿಸಿದ್ದಾರೆ. ಯಾರು ಅಪಮಾನತ್ತಿನಲ್ಲಿ ಇಡಲ್ಪಟ್ಟಿದ್ದಾರೆ. ಸಂಬ್ರಹ್ಮಣ್ಣ ನಗರದ ಪೋಲೀಸ್ ಸ್ಟೇಷನ್‌ನ ಸಬ್‌ಇನ್‌ಸ್ಪೆಕ್ಟರ್ ಅವರು ಏನು ಹೇಳುತ್ತಾರೆ ಎಂದರೆ he has actually offered the money. ಆಲ್ಲಿ ನಿಮಗೆ ನೌಕರಿ ಕೊಡುತ್ತೇವೆ ಎಂದು ಹೇಳುತ್ತಾರೆ. ಹೀಗೆ ಆಮಿಷ ತೋರಿಸತಕ್ಕದ್ದು, ಹಣ ಕೊಡುತ್ತೇವೆ ಎಂದು ಆಮಿಷವನ್ನು ತೋರಿಸ ತಕ್ಕದ್ದು. ಇದರಿಂದ ಅಸಾಮಾನ ಹೆಚ್ಚಾಯಿತು, ಅವರಿಗೆ ಅನುಮಾನ ಜಾಸ್ತಿಯಾಯಿತು. ಆಮೇಲೆ ಆಗಲೇ ತತ್‌ಕ್ಷಣ ಹೆಣವನ್ನು ಬರ್ನ್ ಮಾಡಬೇಕೆಂದು ಫೋರ್ಸ್ ಮಾಡುತ್ತಾರೆ. ಇವೆಲ್ಲ ಪರಿಸ್ಥಿತಿ ಇವತ್ತು, ಈ ಕೇಸ್‌ನಲ್ಲಿ ನಡೆದಿದೆ, ಇದು ಪತ್ರಿಕೆಯಲ್ಲಿ ಬಂದಿದೆ ಮತ್ತು ನಾವು ಕೂಡ ನೋಡಿದ್ದೇವೆ ಅವರ ಹೆಂಡತಿ ಹೇಳುತ್ತಿದ್ದಾರೆ. ಇದಕ್ಕೆ ಸಂಬಂಧಪಟ್ಟವರು ಎಲ್ಲರೂ ಹೇಳುತ್ತಿದ್ದಾರೆ. ಇವತ್ತು

ಇಂತಹ ಒಂದು ಗಂಭೀರವಾದಂಥ ಪ್ರಸಂಗ ನಡೆದಾಗ ನನಗೆ ಕಂಡಿದ್ದು ಏನು ಎಂದರೆ there are some lacunas in the entire incident. ಪಾಪ, ಆತನಿಗೆ ಹೆಂಡತಿ, ಮೂರು ಮಕ್ಕಳು. ಹಿರಿಯ ಮಗುವಿಗೆ ೯ ಅಥವಾ ೧೦ ವರ್ಷ ಇರಬಹುದು. ಸಣ್ಣ ಸಣ್ಣ ಮಕ್ಕಳು. ಆ ಮಗು ಅಳುತ್ತಿತ್ತು. ತಾಯಿ ಬೈಬೈ ಹಾಕುತ್ತಿದ್ದಳು, ಹೀಗಿರುವಾಗ ಪೋಲೀಸರು ಬರ್ನ್ ಮಾಡಬೇಕೆಂದು ಹೇಳುತ್ತಾರೆ. ಹಿಂದೂ ಧರ್ಮದ ಪ್ರಕಾರ ಸಂಸ್ಕಾರ ಮಾಡಬೇಕೆಂದು ಹೇಳಿದರೆ ಆದಷ್ಟು ತಾಳ್ಮೆ ಪೋಲೀಸರಿಗೆ ಇಲ್ಲ ಮೂರು ನಾಲ್ಕು ಪೋಲೀಸ್ ವ್ಯಾನ್‌ಗಳನ್ನು ಹರಿಶ್ಚಂದ್ರ ಘಾಟ್ ಸುತ್ತ ನಿಲ್ಲಿಸಿದ್ದರು, ಜನ ಅಲ್ಲಿ ಹೋಗದ ಹಾಗೆ ತಡೆಗಟ್ಟುವುದಕ್ಕೆ Police were pressurising them to burn the body immediately. Is it the way to treat the dead body ಸತ್ಪಮೇಲಾದರೂ ಸಂಸ್ಕಾರ ಮಾಡಬೇಕೆಂದು ಮನೆಯವರಿಗೆ ಆತಂಕ ಇರುವಾಗ, ಮನಸ್ಸಿನಲ್ಲಿ ಒಂದು ರೀತಿಯ ಆತಂಕ ಇರುವಾಗ ಏಕೆ ನಿಲ್ಲಿಸಲಿಕ್ಕೆ ಪ್ರಯತ್ನ ಮಾಡಿದರು? They could not bury the body yesterday. ಬಹುಶಃ ನಿನ್ನೆತ್ತು ಬೆಳಗ್ಗೆ ಕ್ರಿಮೇಟ್ ಮಾಡಿದರೋ ಏನೋ ಗೊತ್ತಿಲ್ಲ. ತಮಗೆ ಗೊತ್ತಿರಬಹುದು. ಆದರೆ ಈ ರೀತಿಯಲ್ಲಿ ಒಂದು ಅತ್ಯಂತ ಸಂಶಯಾಸ್ಪದವಾದಂಥ ಈ ಒಂದು ಮರಣ ನಿನ್ನೆತ್ತು ಆಗಿದೆ. ಇದರಲ್ಲಿ ಎರಡು ಕೆಲಸಗಳನ್ನು ತಾವು ದಯವಿಟ್ಟು ಮಾಡಬೇಕು. ಏನು ಅಂತಹೇಳಿದರೆ ಒಂದು ಸಿ.ಓ.ಡಿ ಎನ್‌ಕ್ವೈರಿ ಮಾಡಿಸಬೇಕು. ಸಿ. ಬಿ. ಐ. ಅಂತ ಹೇಳುವುದಿಲ್ಲ. ಸಿ. ಓ. ಡಿ. ಎನ್‌ಕ್ವೈರಿ ಮಾಡಿಸಿ. You should register a murder case.

5-30 P. M.

ನೀವು ಆತ್ಮಹತ್ಯೆ ಎಂದು ಕೇಸ್ ರಿಜಿಸ್ಟರ್ ಮಾಡಿದ್ದೀರಿ. You have got to register a case under Sec 302 and entrust it to C. O. D. Suppose if there is no evidence it is for the C.O.D. to refer it. When witnesses are available you have to register it under 302. Then C.O.D. has to conduct the enquiry. In the meanwhile you will have to order for judicial probe. It will not overlap. There are number of rulings and precedents. C. O. D inquiry is as god as a police inquiry. Nothing more than that. So, Judicial probe is necessary. ಇಲ್ಲದಿದ್ದರೆ ಜನಗಳ ಮನಸ್ಸಿನಲ್ಲಿ ಇರತಕ್ಕ ಸಂಶಯವನ್ನು ನಿವಾರಣೆ ಮಾಡುವುದಕ್ಕಾಗುವುದಿಲ್ಲ ಬೇರೆ ರೀತಿ ತನಿಖೆಯಿಂದ ನ್ಯಾಯವನ್ನು, ಈ ಗಂಭೀರ ಘಟನೆಯ ಬಗ್ಗೆ ಕೊಟ್ಟ ಹಾಗೆಆಗುವುದಿಲ್ಲ ಆವರು ಕಡು ಬಡವರು,ಹಸುಳೆಗಳು ಆ ಮಕ್ಕಳನ್ನು ನೋಡುವುದೇ ಒಂದು ಧಾರುಣ ದೃಶ್ಯ. ಆದುದರಿಂದ ತಕ್ಷಣ ಪರಿಹಾರ ಒದಗಿಸಿ ಕೊಡಬೇಕು She has withstood all the pressure. ಸಾವಿರಾರು ರೂಪಾಯಿಗಳನ್ನು ಕೊಡತ್ತೇವೆಂದು ಹೇಳಿದರೂ ಕೂಡ, ಅವರ ಆವಿಷಕ್ಕೆ ಒಪ್ಪದೆ, ತನ್ನ ಗಂಡನ ಪ್ರಾಣ ಮತ್ತು ಮಾನ ಮಂಖ್ಯವೆಂದು ಹೇಳಿರುವ. ಆ ಬಡ ಹೆಂಗಸಿನ ಆತ್ಮಸ್ಥೈರ್ಯವನ್ನು ಎಲ್ಲರೂ ಮೆಚ್ಚಬೇಕು. ಏನು ಪರಿಹಾರವನ್ನು ಕೊಡಬೇಕೋ ಅದನ್ನು ದಯಮಾಡಿ ಕೊಡಬೇಕು ಇಂತಹ ಘಟನೆ, ಇಷ್ಟೊಂದು ನಿರ್ಲಕ್ಷ್ಯವಾಗಿ ಇಷ್ಟೊಂದು ಅಮಾನುಷವಾಗಿ ಪೋಲೀಸಿನವರು ಪೋಲೀಸ್ ಠಾಣೆಯಲ್ಲಿ ವರ್ತಿಸಿದ್ದೇ ಆದರೆ ಅಥವಾ ತಮ್ಮ ಹಣದ ಲಾಲಸೆಗಾಗಿ using some of these accused are being used a guinea pigs. You have got to stop it. You have to stop it not only here but every where in Karnataka. ಇದರ ಬಗ್ಗೆ ತಾವು ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ಏನು ಕಾರ್ಯಕ್ರಮ ರೂಪಿಸುತ್ತೀರಿ ಎಂಬುದನ್ನು ತಾವು ಹೇಳಬೇಕು ಇಂತಹ ಪರಿಸ್ಥಿತಿ ಎಲ್ಲಿಯೇ ಆಗಲೀ ಉದ್ಭವವಾಗದಂತೆ ನೋಡಿಕೊಳ್ಳುವ ಜವಾಬ್ದಾರಿ ನಿಮ್ಮ ಮೇಲೆ ಇದೆ. ಇಂತಹ ಗಂಭೀರ ಪ್ರಸಂಗ ಬೆಂಗಳೂರಿನಲ್ಲಿ ನಡೆದಿರುವಾಗ, ಅತ್ಯಂತ ಉನ್ನತ ಮಟ್ಟದ ಅಧಿಕಾರಿಗಳು ಈ ಬಗ್ಗೆ ಹೆಚ್ಚು ಜಾಗ್ರತೆ ವಹಿಸಬೇಕು. ಹೆಚ್ಚು ಕಾಳಜಿ ವಹಿಸಬೇಕು.ಸಾಮಾನ್ಯವಾಗಿ death in lock ups are being treated as ordinary routine matters. ಸರ್ಕಾರದ ಉನ್ನತ ಅಧಿಕಾರಿಗಳು ನಿರ್ಲಕ್ಷ್ಯ ಮನೋಭಾವನೆಯಿಂದ ನೋಡಿಕೊಂಡಿದ್ದಾರೆ

ಇದರ ಬಗ್ಗೆ ನನಗೆ ಬೇಸರವಾಗಿದೆ. ಪೋಲೀಸ್ ಇಲಾಖೆಗೆ ಇದು ಒಂದು ಕಳಂಕಪ್ರಾಯವಾದ ಘಟನೆ ಇದರಿಂದ ಉದ್ಭವವಾಗಿದೆ ಎನ್ನುವುದನ್ನು ತಾವು ತಿಳಿದುಕೊಳ್ಳಬೇಕು ಸನ್ಮಾನ್ಯ ಮುಖ್ಯ ಮಂತ್ರಿಗಳು ಗೃಹಖಾತೆಯನ್ನು ವಹಿಸಿಕೊಂಡಿದ್ದಾರೆ ಅವರಿಗೆ ಇವತ್ತು ಡೆಲ್ಲಿಯಲ್ಲಿ ಏನೇ ಕೆಲಸ ಕಾರ್ಯವಿರಲಿ, ಇಲ್ಲಿಯೇ ಇದ್ದು ನಡೆದಿರುವಂಥ ಘಟನೆಯ ಗಂಭೀರತೆಯನ್ನು ಅರಿತು, ಸವಂಜಾಯಿಷಿ ಉತ್ತರವನ್ನು ಕೊಡಬೇಕಾಗಿತ್ತು. ಅವರು ಇಲ್ಲದಿರುವುದಕ್ಕಾಗಿ ನನಗೆ ವ್ಯಸನವಾಗಿದೆ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಆರ್. ವೆಂಕಟರಾಮಯ್ಯ.—ಸನ್ಮಾನ್ಯ ಅಧ್ಯಕ್ಷರೇ, ರಷೀದ್ ಕೊಲೆ ಮೊಕದ್ದಮೆ ಆದಮೇಲೇ ಪೋಲೀಸಿನವರಿಗೆ ಬುದ್ಧಿ ಬರುತ್ತಿದೆ, ಇನ್ನು ಮುಂದೆಯಾದರೂ ಇಂತಹ ಪರಿಸ್ಥಿತಿ ಪೋಲೀಸ್ ವ್ಯವಸ್ಥೆಯಲ್ಲಿ ಬರುವುದಿಲ್ಲ ಎಂದು ಭಾವಿಸಿದ್ದೆ. ಆದರೆ ದುರಾದೃಷ್ಟವಶಾತ್, ಬೆಳಿಗ್ಗೆ ಆಟೋರಿಕ್ಷಾ ಡ್ರೈವರ್ ಯೂನಿಯನ್‌ನವರು ಫೋನ್ ಮಾಡಿದಾಗ, ಪೋಲೀಸ್ ವ್ಯವಸ್ಥೆ ಸರಿಹೋಗಿರುವುದಿಲ್ಲವೆಂದು ನನ್ನ ಮನಸ್ಸಿಗೆ ಅರಿವಾಯಿತು. ಏಕೆಂದರೆ ..ರಕ್ಷಕರೇ, ಭಕ್ಷಕರಾದರೆ' ನಮಗೆ ನ್ಯಾಯ ಎಲ್ಲಿ ಸಿಗುತ್ತದೆ? ಯೂನಿಯನ್‌ನವರ ಪ್ರಕಾರ ಈ ಮನುಷ್ಯನನ್ನು ಏನೇ ತಾರೀಖು ಕರೆದುಕೊಂಡು ಹೋದರು? ಏನೇ ತಾರೀಖಿನಿಂದಸತತವಾಗಿ ಹೊಡೆದಿದ್ದಾರೆ. ಬೆಂಗಳೂರನ್ನು ಸುತ್ತಿಸಿ, ಎಷ್ಟು ಬೇಕೋ ಅಷ್ಟನ್ನು ವಸೂಲ್ಮಾಡಿದ್ದಾರೆ. ಆಟೋರಿಕ್ಷಾವಿನಲ್ಲಿ ಚಿಕ್ಕ ವಸ್ತುವಲ್ಲ, ಏನಾದರೂ ಬಂಗಾರವಾದರೆ ಎಲ್ಲೋ ಒಂದು ಕಡೆ ಅಡಗಿಸಿಟ್ಟುಕೊಳ್ಳಬಹುದು. ಆದು ಹೋಗಲಿ ಇದಾದ ಮೇಲೆ ಅವನನ್ನು ಬಿಡಬೇಕು, ಇಲ್ಲದೇ ಹೋದರೆ ಜೈಲಿಗೆ ಹಾಕಬೇಕಾಗಿತ್ತು. ಅದು ಬಿಟ್ಟು ಪೋಲೀಸ್ ಠಾಣೆಯಲ್ಲಿ ಅಮಾನಂಷವಾಗಿ ಹೊಡೆದು ಕೊಲ್ಲುವುದು ಎಂದರೆ ಇದಂ ಅತ್ಯಂತ ಅಮಾನುಷ ಕೃತ್ಯ ಇದರ ಬಗ್ಗೆ ಸೀನಿಯರ್ ಪೋಲೀಸ್ ಆಫೀಸರ್‌ಗಳ ಸಂಬಂಧ ಇಲ್ಲದೇ ಇರಬಹುದು.

ಆದರೂ ಕೂಡಾ ಈ ಸೀನಿಯರ್ ಪೋಲೀಸ್ ಆಫೀಸರ್ಸ್ ಅವರನ್ನು ಏತಕ್ಕೆ ರಕ್ಷಣೆ ಮಾಡ ಬೇಕೆಂದು ಸರ್ಕಾರದವರು ಹೋಗುತ್ತಿದ್ದಾರೆಂಬುದು ಅರ್ಥವಾಗುತ್ತಿಲ್ಲ. ಇದು ಒಂದು ಮರ್ಡರ್ ಎನ್ನುವುದಕ್ಕೆ ನಾನು ಕೆಲವು ಉದಾಹರಣೆಗಳನ್ನು ಹೇಳುತ್ತೇನೆ. ಏನೇ ತಾರೀಖು ಈ ವ್ಯಕ್ತಿಯನ್ನು ಹಿಡಿದುಕೊಂಡು ಹೋದರು. ಇದನ್ನು ಇಬ್ಬರು ಕಾರ್ಪೊರೇಟರ್ಸ್ ನೋಡಿದ್ದಾರೆ. ಡ್ರೈವರ್ಸ್ ಎಲ್ಲಾ ಹೋಗಿ ನೋಡಿದ್ದಾರೆ. ಅವನಿಗೆ ಮೈಯಲ್ಲಾ ಬಾಸುಂಡೆಗಳು ಬರುವ ಹಾಗೆ ಏಟುಗಳು ಬಿದ್ದಿವೆ ಆದರೂ ಅವನನ್ನು ಬಿಡಲಿಲ್ಲ. ಆಮೇಲ್ಲಾದರೂ ಕೂಡಾ ಅವನನ್ನು ಬಿಡಬಹುದಾಗಿತ್ತು. ನಿಜವಾಗಲೂ ಕೂಡಾ ಅವರು ಹೊಡೆಯದೇ ಇದ್ದಿದ್ದರೆ, ಪೋಸ್ಟ್‌ಮಾರ್ಟಮ್ ಮಾಡುವುದಕ್ಕೆ ಮುಂಚಿ ಇನ್‌ಕ್ವೆಸ್ಟ್ ಮಾಡುವ ಕಾಲದಲ್ಲಿ ಅವನ ತಂದೆ ತಾಯಿಗಳಿಗೆ, ಹೆಂಡತಿ ಮಕ್ಕಳಿಗೆ ತೋರಿಸುವುದು ಅವರ ಕರ್ತವ್ಯ. ಆದರೆ ಅದನ್ನು ಸಹ ಇವರು ಏತಕ್ಕೆ ಮಾಡಲಿಲ್ಲ? ಇನ್ನೊಂದು ಮುಖ್ಯವಾದುದೂ ಏನು ಎಂದರೆ, ಒಂದೂ ಜಮಖಾನೆ ಸುತ್ತಿಕೊಂಡು ನೇಣು ಹಾಕಿಕೊಂಡ ಎಂದು ಇವರೂ ಹೇಳುತ್ತಿದ್ದಾರೆ. ಜಮಖಾನೆ ಸುತ್ತಿಕೊಂಡು ನೇಣು ಹಾಕಿಕೊಂಡರೆ ಯಾರೂ ಸಾಯುವುದಿಲ್ಲ, ಅದು ಅವರಿಗೂ ಗೊತ್ತಿರಬಹುದು.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.— ಅದು ಅವರಿಗೆ ಹೇಗೆ ಗೊತ್ತಾಗುತ್ತದೆ ?

ಶ್ರೀ ಆರ್. ವೆಂಕಟರಾಮಯ್ಯ.— ಆ ಕಡೆ ಇರತಕ್ಕ ನಮ್ಮ ಸ್ನೇಹಿತರೂ ಸಹ ಇದನ್ನು ಒಪ್ಪಿ ಕೊಳ್ಳುತ್ತಾರೆ ಎಂದು ನಾನು ತಿಳಿದುಕೊಳ್ಳುತ್ತೇನೆ ಇಷ್ಟು ದಿವಸ ಹಗ್ಗ ಬಿಗಿದುಕೊಂಡು ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡ ಎಂದು ಹೇಳುತ್ತಿದ್ದರು. ಇವತ್ತು ಅದನ್ನು ಬಿಟ್ಟುಬಿಟ್ಟರು. ತಕ್ಷಣ ಅವರಿಗೆ ಅದು ಅರ್ಥವಾಗಲಿಲ್ಲ ಇದರ ಬಗ್ಗೆ ಗಲಾಟೆ ಆಗುತ್ತದೆ, ನಾವುಗಳು ಮಾತನಾಡುತ್ತೇವೆ ಎಂದು ಅವರಿಗೆ ಗೊತ್ತಾಗಲಿಲ್ಲ ರಗ್ ಸುತ್ತಿಕೊಂಡು ಸತ್ತ ಹೋದ ಎಂದು ಹೇಳಿಬಿಟ್ಟರು, ರಗ್ ಸುತ್ತಿಕೊಂಡು ಸಾಯುವುದಕ್ಕೆ ಆಗುತ್ತದೆಯೇ ? ಆ ಪೋಲೀಸ್ ಸ್ಟೇಷನ್ ರೂಫ್ ಏನೂ ೨೦ ಅಡಿ ಇಲ್ಲ. ಅದು ಇರುವುದು ೫-೬ ಅಡಿ. ೫-೬ ಅಡಿ ಎತ್ತರದಲ್ಲಿ ನೇಣು ಹಾಕಿಕೊಂಡರೆ ಯಾರೂ ಸಾಯುವುದಿಲ್ಲ. ಆದ್ದರಿಂದ ಇವರು ಏನು ಒಂದು ಥಿಯರಿ ಸೃಷ್ಟಿ ಮಾಡಿದ್ದಾರೆ ಅದು ಶುದ್ಧ ಸುಳ್ಳು, ನಿಜವಾಗಲೂ ಇಂತಹ ಪರಿಸ್ಥಿತಿ ಆಗಿಲ್ಲ. ಅವನು ಸತ್ತು ಹೋಗಿರಬೇಕು. ಸತ್ತು ಹೋದ ತಕ್ಷಣ ವಿಕ್ಟೋರಿಯಾ ಹಾಸ್ಪಿಟಲ್‌ಗೆ ತೆಗೆದುಕೊಂಡು ಹೋಗಿ ಪೋಸ್ಟ್ ಮಾರ್ಟಮ್ ಮಾಡಿಸಿದರು. ಯಾರಿಗೂ ಹೇಳದೇ ಕೇಳದೆ ಶವಸಂಸ್ಕಾರ ಮಾಡುವುದಕ್ಕೆ ಹೋದರು. ಆದರೆ ಜನಗಳು ಹುಶಾರಾಗಿಬಿಟ್ಟರು, ಮಾನ್ಯ ವೀರಪ್ಪಮೊಯಿಲಿಯವರಿಗೆ ಹೇಳಿದರು. ಡ್ರೈವರ್ಸ್

ಎಲ್ಲಾ ಸೇರಿದರಂ. ಸಾವಿರಾರು ಜನ ಸೇರಿದ ಮೇಲೆ ಪೋಲೀಸ್ ವ್ಯವಸ್ಥೆ ಇಟ್ಟುಕೊಂಡು ಶವಸಂಸ್ಕಾರ ಮಾಡಿರಂತ್ತಾರೆ. ಇದರಿಂದ ಇದು ಮರ್ಡರ್ ಎಂದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಇದು ಬಹಳ ಅನ್ಯಾಯ. ಅವರನ್ನು ಪ್ರೊಟಿಕ್ಟ್ ಮಾಡುವುದು ಬೇಡ. ಸಸ್ಪೆಂಡ್ ಮಾಡುವುದು ಎಂದರೆ ಏನು ಎಂದು ನನಗೆ ಗೊತ್ತು. ಸಸ್ಪೆನ್‌ಷನ್ ಪನಿಷ್‌ಮೆಂಟ್ ಅಲ್ಲ. ಇನ್ನು ಮೂರು ದಿನಕ್ಕೆ ಡಿಪಾರ್ಟ್‌ಮೆಂಟ್‌ನಲ್ಲಿ ಒಂದು ಎನ್‌ಕ್ವೈರಿ ಎಂದು ಮಾಡುವುದು, ನಂತರ ಬೆಂಗಳೂರಿನಿಂದ ಇನ್ನೊಂದು ಪೋಲೀಸ್ ಸ್ಟೇಷನ್‌ಗೆ ಅವರನ್ನು ಟ್ರಾನ್ಸ್‌ಫರ್ ಮಾಡಿ ಅಲ್ಲಿ ಹೋಗಿ ಬೇರೆಯವರನ್ನು ಹೊಡೆದು ಸಂಪಾದಿಸಿಕೋ ಹೋಗಂ ಎಂದು ಕಳುಹಿಸುವುದು. ಇಷ್ಟೇ ಆಗುವುದು, ಇದರಿಂದ ಸಮಸ್ಯೆ ಮುಂಗಿದು ಹೋಗುವುದಿಲ್ಲ. ಇದು ಬಹಳ ಸೀರಿಯಸ್ ಕ್ರೈಮ್. ಇದರ ಬಗ್ಗೆ ತಕ್ಷಣ ನಮ್ಮ ಸ್ನೇಹಿತರು ಹೇಳಿದ ಹಾಗೆ ಅವರ ಮೇಲೆ ಮರ್ಡರ್ ಕೇಸ್ ರಿಜಿಸ್ಟರ್ ಮಾಡಿ ಅವರು ತಪ್ಪಿತಸ್ಥರು ಎಂದಂ ಕಂಡು ಬಂದರೆ ಚಾರ್ಜ್‌ಷೀಟ್ ಹಾಕಿ. ಇಲ್ಲದೇ ಹೋದರೆ ಬಿಡಿ. ಹೊಟ್ಟೆ ನೋವು ಬಂದುಬಿಡ್ತು, ನೇಣು ಹಾಕಿಕೊಂಡ ಎಂದು ಹೇಳುವ ಸುಳ್ಳು ವಾದವನ್ನು ತಾವು ಒಪ್ಪಬಾರದು. ಮಾನ್ಯ ಮಂತ್ರಿಗಳೂ ಅವರನ್ನು ಪೀಲ್ಡ್ ಮಾಡುವುದು ಬೇಡ. ಇದಕ್ಕೆ ಮಾನ್ಯ ಬೊಮ್ಮಾಯಿಯವರು ಉತ್ತರ ಕೊಡಬಹುದು, ಅವರಿಗೂ ಮಕ್ಕಳು ಉಂಟು. ಈ ವ್ಯಕ್ತಿಗೂ ಸಹ ಮೂರು ಜನ ಮಕ್ಕಳು ಇದ್ದಾರೆ ಅವರ ಗತಿ ಏನು ? ಇಂತಹ ಪರಿಸ್ಥಿತಿಯಲ್ಲಿ ಅವನ ಫ್ಯಾಮಿಲಿಗೆ ಪರಿಹಾರ ಕೊಡಬೇಕು. ಯಾರು ತಪ್ಪು ಮಾಡಿದ್ದಾರೆ ಅವರ ಬಗ್ಗೆ ಕ್ರೂರವಾದ ಕ್ರಮ ತೆಗೆದುಕೊಳ್ಳಬೇಕು. ಇಷ್ಟು ಹೇಳಿ ತಾವು ಈ ಒಂದು ಅಡ್‌ಜರ್ನ್‌ಮೆಂಟ್ ಮೋಷನ್‌ಗೆ ಅವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪಂಪಾಪತಿ.— ಅಧ್ಯಕ್ಷರೇ.....

ಅಧ್ಯಕ್ಷರು.— ಪಂಪಾಪತಿಯವರೇ, ಅಡ್‌ಜರ್ನ್‌ಮೆಂಟ್ ಮೋಷನ್‌ಗೆ ಯಾರು ಸಹಿ ಹಾಕಿರುತ್ತಾರೆ ಅವರಿಗೆ ಮಾತ್ರ ಮಾತನಾಡಲು ಅವಕಾಶ ಉಂಟಂ. ನೀವು ಸಹಿ ಹಾಕಿಲ್ಲ. ನಿಮಗೆ ಅವಕಾಶ ಕೊಡುವುದಕ್ಕೆ ಆಗುವುದಿಲ್ಲ.

ಶ್ರೀ ಪಂಪಾಪತಿ.— ಅಧ್ಯಕ್ಷರೇ, ನಾನೂ ಸಹಿ ಮಾಡಿದ್ದೇನೆ, ಬೆಳಗ್ಗೆ ಹೋಗಿ ನೋಡಿಕೊಂಡು ಬಂದಿದ್ದೇನೆ. ನನಗೆ ತಿಳಿದಂಥ ಎರಡು ಮಾತನ್ನು ಆಡುತ್ತೇನೆ.

ಅಧ್ಯಕ್ಷರು.— ಈಗ ಕೊಟ್ಟರೆ ಬರುವುದಿಲ್ಲ, ವೆಂಕಟರಾಮಯ್ಯನವರು ಸಹಿ ಹಾಕಿದ್ದರು, ಐದು ಮಂದಿ ಸಹಿ ಇತ್ತು. ಐದು ಮಂದಿಗೆ ಅವಕಾಶ ಕೊಟ್ಟಿದ್ದೇನೆ, ಇನ್ನು ಬೇರೆಯವರಿಗೆ ಕೊಡುವುದಕ್ಕೆ ಆಗುವುದಿಲ್ಲ.

ಶ್ರೀ ಎಂ. ಪಲ್ಲಿಕಾರ್ಜುನ ಖರ್ಗೆ.— ಅವರಿಗೂ ಒಂದೆರಡು ಮಿನಿಟ್ ಅವಕಾಶ ಕೊಡಿ.

ಶ್ರೀ ಎಂ. ವೀರಪ್ಪಮೊಯಿಲಿ.— ಅದು ಎಂ. ಎಸ್. ಕೃಷ್ಣನ್‌ರವರ ಕಾನ್‌ಸ್ಟಿಟ್ಯುಯೆನ್ಸಿಗೆ ಬರುತ್ತದೆ. ಅವರಿಗೂ ಅವಕಾಶ ಕೊಡಿ.

ಶ್ರೀ ಪಂಪಾವತಿ.—ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ಬೆಳಿಗ್ಗೆ ನಾವೆಲ್ಲ ಪತ್ರಿಕೆಗಳಲ್ಲಿ ಬಂದಿರುವ ಸುದ್ದಿಯನ್ನು ನೋಡಿದ್ದೇವೆ. ಸುಬ್ರಮಣ್ಯನಗರ ಪೋಲೀಸ್ ಠಾಣೆ ವ್ಯಾಪ್ತಿಯಲ್ಲಿ ಒಂದು ಕೊಲೆಯಾಗಿದೆ...

ಅಧ್ಯಕ್ಷರು.—ಇವತ್ತು ಸ್ಪೆಷಲ್ ಕೇಸ್ ಅಂತ ಅವಕಾಶ ಕೊಟ್ಟಿದ್ದೇನೆ. ಇದೇ ಒಂದು ಕನ್‌ವೆನ್‌ಷನ್ ಅಲ್ಲ.

ಶ್ರೀ ಪಂಪಾಪತಿ.—ನಂತರ ನಾನು ಸುಮಾರು ೧೧–೧೦ ಗಂಟೆ ಸಮಯದಲ್ಲಿ ಹೋಗಿ ನೋಡಿದಾಗ ಇನ್ನು ಅಲ್ಲಿಯೇ ಶವವನ್ನು ಇಟ್ಟುಕೊಂಡಿದ್ದರು, ಅವರ ಸಂಬಂಧಿಕರೆಲ್ಲರೂ ಇದ್ದರು. ಅಲ್ಲಿ ನಾನು ವಿಚಾರ ಮಾಡಿದಾಗ ಅವರು ಹೇಳಿದರು ನೋಡಿ ಸ್ವಾಮಿ ಪೋಲೀಸಿನವರು ಹೊಡೆದು ಸಾಯಿಸಿದ್ದಾರೆಂದು, ಮತ್ತು ಪೋಲೀಸಿನವರು ಇವರ ಮನೆಗೆ ಆತನು ಬೇಕೆಂದು ಹುಡುಕಿಕೊಂಡು ಹೋದಾಗ ಆತ ಸಿಕ್ಕದಿದ್ದಕ್ಕೆ ಆತನ ತಂದೆಯನ್ನು ಕರೆದುಕೊಂಡು ಹೋಗಿ ಪೋಲೀಸ್ ಠಾಣೆಯಲ್ಲಿ ಇಟ್ಟುಕೊಂಡು ನಿನ್ನ ಮಗ ಸಿಕ್ಕಿದ ಮೇಲೆ ನಿನ್ನನ್ನು ಬಿಡುತ್ತೇವೆಂದು ಹೇಳಿದ್ದಾರೆ. ಆ ಮುದುಕನಿಗೆ ಸುಮಾರು ೬೦–೬೫ ವರ್ಷ ವಯಸ್ಸಿರಬಹುದು, ಅವರ ತಂದೆಯನ್ನು ಕರೆದುಕೊಂಡು ಹೋಗಿ ಪೋಲೀಸ್ ಠಾಣೆಯಲ್ಲಿಟ್ಟು ಕೊಂಡ ನಂತರ ಶುಕ್ರವಾರ ಈತ ಸಿಕ್ಕಿದ್ದಾನೆ. ಆಗ ಆತನನ್ನು ಒಳಗಡೆ ಹಾಕಿದ್ದಾರೆ. ಈ ವಿಷಯ

ಅವರಮನೆಯಲ್ಲಿ ಆತನ ಹೆಂಡತಿಗೆ ಮಾತ್ರ ಗೊತ್ತಿತ್ತು. ಆತನ ಹೆಂಡತಿ ತನ್ನ ಗಂಡನನ್ನು ನೋಡಲು ಹೋಗಿದ್ದಾಗ ಆಕೆಯನ್ನು ಸಹ ನೋಡಲು ಬಿಟ್ಟಿಲ್ಲ. ಆತನ ಮಕ್ಕಳು ತನ್ನ ತಂದೆಯನ್ನು ನೋಡಲು ಹೋಗಿದ್ದಾರೆ ಅವರಿಗೂ ಸಹ ಪೋಲೀಸಿನವರು ಬಿಟ್ಟಿಲ್ಲ. ಆದ್ದರಿಂದ ನಮ್ಮ ಮಾನ್ಯ ಸದಸ್ಯರಾದ ವೀರಪ್ಪಮೊಯಿಲಿಯವರು ಹೇಳಿದಹಾಗೆ ಅರೆಸ್ಟ್ ಮಾಡಿದ ೨೪ ಗಂಟೆಗಳಲ್ಲಿ ಆತನನ್ನು ಕೋರ್ಟಿಗೆ ಹಾಜರ್ ಪಡಿಸಬೇಕಾಗಿತ್ತು, ಹಾಜರ್‌ಪಡಿಸಿದ್ದರೆ ಅವರು ಮುಂದಿನ ಕ್ರಮ ಕೈಗೊಳ್ಳುತ್ತಿದ್ದರು ಆದರೆ ಆ ಕೆಲಸ ಸಹ ಮಾಡಲಿಲ್ಲ. ಆತನನ್ನು ಪೋಲೀಸ್ ಠಾಣೆಯಲ್ಲಿಯೇ ಏತಕ್ಕೆ ಇಟ್ಟುಕೊಂಡರು? ಇದು ಅಲ್ಲಿರತಕ್ಕಂಥ ಮುಖ್ಯವಾದ ಪ್ರಶ್ನೆ. ಇಲ್ಲಿ ಅವರು ತಪ್ಪು ಮಾಡಿದ್ದಾರೆ. ಸಂಪೂರ್ಣ ೬-೭ ದಿವಸ ಪೋಲೀಸ್ ಠಾಣೆಯಲ್ಲಿ ಇಟ್ಟುಕೊಂಡಿದ್ದು ಮೊದಲ ಅಪರಾಧ. ಪೋಲೀಸ್ ಠಾಣೆಗಳಲ್ಲಿ ಏನೇನು ಆಗುತ್ತದೆಂದು ಈಗಾಗಲೇ ಮಾನ್ಯ ಸದಸ್ಯರು ಹೇಳಿದ್ದಾರೆ. ಆ ಬಗ್ಗೆ ನಾನು ಇನ್ನು ಹೆಚ್ಚು ಏನನ್ನೂ ಇಲ್ಲಿ ಹೇಳುವುದಿಲ್ಲ. ಆತ ಸತ್ತ ಮೇಲೆ ಮೊದಲು ಮನೆಯವರಿಗೆ ತಿಳಿಸಬೇಕಾಗಿತ್ತು, ಆದರೆ ಅವರಿಗೂ ಸಹ ತಿಳಿಸದೆ ಆಸ್ಪತ್ರೆಗೆ ಸಾಗಿಸಿದ್ದಾರೆ. ಆಸ್ಪತ್ರೆಗೆ ಸಾಗಿಸುವಾಗ ನನ್ನ ಗುಂಡ ಸತ್ತಿದ್ದಾನೆಂದು ಆ ಹೆಣ್ಣು ಮಗುಳಿಗೆ ಗೊತ್ತಾಗಿದ್ದು ರಾತ್ರಿ ೧೦-೦೦ ಗಂಟೆಗೆ. ಅವರು ಆಸ್ಪತ್ರೆಗೆ ಕರೆದುಕೊಂಡು ಹೋಗಿ ಪೋಸ್ಟ್ ಮಾರ್ಟಂ ಮಾಡಿ ಶವಸಂಸ್ಕಾರ ಮಾಡಲು ಹೋಗಿದ್ದಾರೆ, ಆಗ ಆಕೆ ಶವಸಂಸ್ಕಾರ ಮಾಡಲು ಬಿಟ್ಟಿಲ್ಲ. ಪೋಸ್ಟ್ ಮಾರ್ಟಂ ಮಾಡಿದ ಮೇಲೆ ಅವರ ಮನೆಯವರಿಗೆ ತಿಳಿಸಿದ್ದಾರೆ. ಆಗ ಅವರು ಶವಸಂಸ್ಕಾರ ಮಾಡುವುದು ಬೇಡ ಅವರಿಗೆ ಸಾಕಷ್ಟು ಜನ ಬಂಧು ಬಳಗದವರು ಇದ್ದಾರೆ, ಅವರೆಲ್ಲಾ ಬರಬೇಕು ಎಂದು ಪಟ್ಟು ಹಿಡಿದಿದ್ದಾರೆ. ಆತನಿಗೆ ಮೂರು ಜನ ಹೆಣ್ಣು ಮಕ್ಕಳು, ಮೂರು ಜನ ತಂಗಿಯರು, ಮೂರು ಜನ ತಮ್ಮಂದಿರು ತಂದೆ ತಾಯಿ ಹೆಂಡತಿ ಮಕ್ಕಳು ಎಲ್ಲಾ ಇದ್ದಾರೆ. ಇವರ್ಯಾರಿಗೂ ಗೊತ್ತಿಲ್ಲದೆ ಶವಸಂಸ್ಕಾರ ಮಾಡುವುದು ಸಾಧ್ಯವಿಲ್ಲವೆಂದು ತಡೆ ಹಿಡಿದಿದ್ದಾರೆ, ನಾನು ಬೆಳಿಗ್ಗೆ ಹೋಗಿದ್ದಾಗಲೂ ಸಹ ಶವಸಂಸ್ಕಾರ ನಡೆದಿಲ್ಲ. ಅವರೇನು ಹೇಳುತ್ತಾರೆಂದರೆ ಪುನಃ ಪೋಸ್ಟ್ ಮಾರ್ಟಂ ಮಾಡಿ ಸರಿಯಾದಂತಹ ರಿಪೋರ್ಟ್ ಕೊಡಬೇಕು, ಈಗ ಬಂದಿರತಕ್ಕಂಥ ರಿಪೋರ್ಟ್ ಸರಿಯಾದ ರಿಪೋರ್ಟ್ ಅಲ್ಲ. ಅವರು ನೇಣು ಹಾಕಿಕೊಂಡು ಸಾಯುವುದಕ್ಕೆ ಸಾಧ್ಯವಿಲ್ಲ, ಜವಂಖಾನೆಯಲ್ಲಿ ನೇಣು ಹಾಕಿಕೊಂಡು ಸಾಯುವಂತಹ ಪರಿಸ್ಥಿತಿ ಏನೂ ಇರಲಿಲ್ಲ ಎಂದು, ನಾನು ಸಹ ಆತನ ಮುಖ ನೋಡಿದೆ, ಆತ ನೇಣು ಹಾಕಿಕೊಂಡು ಸಾಯುವಂತಹ ವ್ಯಕ್ತಿಯಲ್ಲ. ಇನ್ನೂ ಗಟ್ಟಿಮುಟ್ಟಾಗಿ ಇದ್ದಾನೆ. ಆತನಿಗೆ ಅಂತಹ ಸ್ವಭಾವ ಕೂಡ ಇದ್ದಂತೆ ಕಾಣಲಿಲ್ಲ. ಆತ ಸತ್ತಿರುವುದನ್ನು ನೋಡಿದರೆ ಹಿಂಸೆಯನ್ನು ತಡೆಯಲಾರದೆ ಸತ್ತಿರುವುದರಲ್ಲಿ ಸ್ವಲ್ಪವೂ ಸಂಶಯ ಇಲ್ಲ. ಆದ್ದರಿಂದ ಈಗ ಅವರು ಶವಸಂಸ್ಕಾರಕ್ಕೆ ವಿರೋಧ ವ್ಯಕ್ತಪಡಿಸುತ್ತಿದ್ದಾರೆ. ಆದ್ದರಿಂದ ದಯಮಾಡಿ ಪೋಸ್ಟ್ ಮಾರ್ಟಂ ಪುನಃ ಮಾಡಿಸಿ ರಿಪೋರ್ಟ್ ಅನ್ನು ಸರಿಯಾಗಿ ಕೊಡುವ ವ್ಯವಸ್ಥೆಯಾಗಬೇಕು. ತಾವು ಈಗಾಗಲೇ ಅವರನ್ನು ಸಸ್‌ಪೆಂಡ್ ಮಾಡಿದ್ದೀರಿ. ಅದು ಸರಿ. ಕೊಲೆ ಕೇಸ್ ಎನ್ನತಕ್ಕೆ ಆಪಾದನೆಯನ್ನು ಸಂಬಂಧಪಟ್ಟವರ ಮೇಲೆ ಹೊರಿಸಬೇಕು. ಏಕೆಂದರೆ, ಪೋಲೀಸಿನವರ ಬಂದೋಬಸ್ತ್‌ನಲ್ಲಿ ಇರಬೇಕಾದ ವ್ಯಕ್ತಿಯನ್ನು ಪೋಲೀಸಿನವರೇ ಹೊಡೆದು ಕೊಲೆ ಮಾಡಿರುವುದರಿಂದ ಸಂಬಂಧಪಟ್ಟವರನ್ನು ಸರಿಯಾಗಿ ಶಿಕ್ಷಿಸಬೇಕು ಮತ್ತು ಅವರ ಮೇಲೆ ಕೊಲೆ ಕೇಸ್ ಹಾಕಿ ಜೈಲಿನಲ್ಲಿ ಇಡಬೇಕು. ತಪ್ಪಿತಸ್ಥರನ್ನು ಯಾವ ರೀತಿ ಜೈಲಿನಲ್ಲಿ ಇಡುವ ವ್ಯವಸ್ಥೆ ಇದೆಯೋ ಅದೇ ವ್ಯವಸ್ಥೆಯನ್ನು ಇವರಿಗೆ ಸಹ ಆಳವಡಿಸಬೇಕು. ಈ ಸತ್ತ ವ್ಯಕ್ತಿಗೆ ತಂದೆ ತಾಯಿಗಳು ಇದ್ದಾರೆ, ಹೆಂಡತಿ ಇದ್ದಾಳೆ, ಅವರು ಕಡು ಬಡವರು. ಆತನಿಗೆ ಚಿಕ್ಕ ಚಿಕ್ಕ ಮೂರು ಮಕ್ಕಳು ಇದ್ದಾರೆ, ಶೋಭಾ, ಯಶೋಧ ಮತ್ತು ಸೋಮೇಶ ಎನ್ನುವವರೇ ಈ ಮೂರು ಮಕ್ಕಳು. ಅವರುಗಳಿಗೆ ಯಾವ ಸಂಪಾದನೆಯೂ ಇಲ್ಲ. ತಂದೆ ತಾಯಿಗಳಿಗೆ ವಯಸ್ಸಾಗಿದೆ. ಜೀವನ ಮಾಡುವುದಕ್ಕೆ ಬೇರೆ ದಾರಿಯೇ ಇಲ್ಲ. ಆದ್ದರಿಂದ, ದಯವಿಟ್ಟು ಕೂಡಲೇ ಅವರಿಗೆ ಪರಿಹಾರ ಕೊಡಬೇಕು. ಇದರ ಜೊತೆಗೆ ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸಬೇಕು. ಅನ್ಯಾಯವಾಗಿರತಕ್ಕಂಥ ಈ ಕುಟುಂಬಕ್ಕೆ ಪರಿಹಾರವನ್ನು ಕೊಟ್ಟು ಇನ್ನು ಮುಂದೆ ಪೋಲೀಸಿನವರು ಈ ರೀತಿ ಯಾರನ್ನೂ ಕೊಲೆ ಮಾಡದ ಹಾಗೆ ನೋಡಿಕೊಳ್ಳಬೇಕು. ಇದರಿಂದ ಇಡೀ ಕರ್ನಾಟಕ ರಾಜ್ಯಕ್ಕೆ ಕಳಂಕ ಬಂದಿದೆ. ಇಂಥ ಕೆಲಸಗಳು ಮತ್ತೆ ಆಗದಂತೆ ಹಿರಿಯ ಅಧಿಕಾರಿಗಳು ಮತ್ತು ಮಂತ್ರಿಯವರು ನೋಡಿಕೊಳ್ಳಬೇಕೆಂದು ನನ್ನ ಅಭಿಪ್ರಾಯವನ್ನು ಈ ಸಂದರ್ಭದಲ್ಲಿ ಕೊಡುವುದಕ್ಕೆ ಇಷ್ಟಪಡುತ್ತೇನೆ. ನಿಜವಾಗಿಯೂ ನಾನು ನೇರವಾಗಿ ಅಲ್ಲಿಗೆ ಹೋಗಿ ನೋಡಿಕೊಂಡು ಬಂದು ವಿಷಯಗಳನ್ನು ಸದನದ ಮುಂದೆ ಇಟ್ಟಿದ್ದೇನೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಅಧ್ಯಕ್ಷರು.—ಮಾನ್ಯ ಬಸವಲಿಂಗಪ್ಪನವರು.

† ಶ್ರೀ ಬಿ. ಬಸವಲಿಂಗಪ್ಪ (ಯಲಹಂಕ).—ಮಾನ್ಯ ಅಧ್ಯಕ್ಷರೇ ಸುಬ್ರಮಣ್ಯ ನಗರದ ಪೋಲೀಸ್ ಸ್ಟೇಷನ್‌ನಲ್ಲಿ ಮರಣ ಹೊಂದಿದ ಚೆನ್ನಯ್ಯನ ವಿಚಾರದಲ್ಲಿ ಈಗಾಗಲೇ ಸಾಕಷ್ಟು ಚರ್ಚೆ ಯಾಗಿದೆ. ಮಾನ್ಯ ಪೊಲೀಲಿಯವರು ಸ್ಥಳಕ್ಕೇ ಹೋಗಿ ಅದನ್ನು ವಿಚಾರ ಮಾಡಿ ವಿಷಯವನ್ನು ಸದನದ ಮುಂದೆ ಇಟ್ಟಿದ್ದಾರೆ. ಇದರ ಬಗ್ಗೆ ಎಲ್ಲಾ ವಿವರಗಳು ಪತ್ರಿಕೆಗಳಲ್ಲಿ ಬಂದಿವೆ. ಹೋದ ತಿಂಗಳು ಅಂದರೆ ಏಪ್ರಿಲ್ ೧೬ನೇ ತಾರೀಖು ಇಂಥದ್ದೇ ಒಂದು ಪ್ರಸಂಗ ನಡೆದಿತ್ತು. ಆದಕ್ಕೆ ಉತ್ತರ ವಾಗಿ ಮಾನ್ಯ ಮಂತ್ರಿಗಳು ಇದೇ ರೀತಿ ಐದಾರು ಜನರು ಪೋಲೀಸ್ ಲಾಕಪ್‌ನಲ್ಲಿ ಸತ್ತಿದ್ದಾರೆ. ಅವರು ಸಾಯುವುದಕ್ಕೆ ಕಾರಣಗಳೇನು ಎಂಬ ಬಗ್ಗೆ ಮಂಡಿಸಿ ಮಂತ್ರಿಯವರು ವಿವರವಾಗಿ ಹೇಳಿದ್ದಾರೆ ಇದರ ಹಿನ್ನೆಲೆಯಲ್ಲಿ ನಾನು ಇವತ್ತಿನ ದಿವಸ ಹೇಳಬೇಕಾದರೆ. ಪೋಲೀಸ್ ಲಾಕಪ್‌ನಲ್ಲಿ ಸಾಯಂ ಬೇಕಾದರೆ ಕೆಲವು ಕಾರಣಗಳು ಇರಲೇಬೇಕು. ಇನ್ನು ಮುಂದೆ ಯಾವುದೇ ಮನುಷ್ಯನನ್ನು ಪೋಲೀಸ್ ಸ್ಟೇಷನ್‌ಗೆ ಕರೆದುಕೊಂಡು ಹೋಗುವುದಕ್ಕಿಂತ ಮುಂಚೆ ಅವನ ಆರೋಗ್ಯ ಹೇಗಿತ್ತು ಎಂಬುದನ್ನು ರೆಕಾರ್ಡ್ ಮಾಡಬೇಕು. ಕೆಲವು ಸಂದರ್ಭಗಳಲ್ಲಿ ಒಳ್ಳೆಯವರನ್ನು ಪೋಲಿಸ್ ಸ್ಟೇಷನ್‌ಗೆ ಕರೆದುಕೊಂಡು ಹೋದರೆ ಮಾನ ಹೋಯಿತೆಂದು ನೇಣು ಹಾಕಿಕೊಳ್ಳತಕ್ಕ ಪ್ರಸಂಗ ಇರಬಹುದು. ಆದರೆ, ಇತ್ತೀಚೆಗೆ ಮಾನ್ಯ ಸದಸ್ಯರಾದ ಶ್ರೀ ವೆಂಕಟರಾಮಯ್ಯನವರು ಹೇಳಿದ ಹಾಗೆ ರಫೀದ್‌ರ ಕೊಲೆ ಪ್ರಕರಣದ ನಂತರ ನಮ್ಮ ರಾಜ್ಯದಲ್ಲಿ ಉದ್ಭವಿಸಿರತಕ್ಕ ಈ ಘಟನೆ ಸಂಶಯಾಸ್ಪದ ರೀತಿಯಲ್ಲಿ ಆಗಿದೆ. ಪೋಲೀಸ್ ಇಲಾಖೆ ಬಗ್ಗೆ ನಾವು ಕೂಲಂಕುಷವಾಗಿ ವಿಚಾರ ಮಾಡಲೇ ಬೇಕು. ಯಾರೇ ಅಧಿಕಾರದಲ್ಲಿ ಇರಲಿ, ಯಾವ ಸರ್ಕಾರವೇ ಅಧಿಕಾರದಲ್ಲಿ ಇರಲಿ, ಈ ಸಾಮಾಜಿಕ ವ್ಯವಸ್ಥೆಯಲ್ಲಿ ಶಾಂತಿಯನ್ನು ನೆಲೆಸತಕ್ಕ ರೀತಿಯಲ್ಲಿ ನಾವು ಕೆಲಸ ಮಾಡಬೇಕು. ಪೋಲೀಸ್ ಅಧಿಕಾರಿಗಳು ಏನು ಇದ್ದಾರೆ, ಅವರಿಂಗಳು ಸಾರ್ವಜನಿಕರಲ್ಲಿ ಒಂದು ರೀತಿಯ ಸಂಶಯಾಸ್ಪದವಾಗಿ ನಡೆದುಕೊಳ್ಳದೆ ಒಳ್ಳೆಯ ಸದ್ಭುದ್ಧಿಯಿಂದ ಕೆಲಸ ಮಾಡಬೇಕು. ಪೋಲೀಸರು ಎಂದರೆ ಆರಕ್ಷಕರು ಎಂದು. ರಕ್ಷಕರು ಎಂದರೆ ಕಾಪಾಡತಕ್ಕವರು, ಆರಕ್ಷಕರು ಎಂದರೆ ಸಂಪೂರ್ಣವಾಗಿ ರಕ್ಷಣೆ ಮಾಡತಕ್ಕವರು ಎಂದು ಅರ್ಥ. ಈ ಆರಕ್ಷಕರು ಜನಗಳ ಸ್ವಾತಂತ್ರ್ಯವನ್ನು ಸಂಪೂರ್ಣವಾಗಿ ರಕ್ಷಣೆ ಮಾಡಲೇ ಬೇಕು ಆದರೆ ಇವತ್ತು ಏನಾಗಿದೆ? ಪೋಲೀಸ್ ಸ್ಟೇಷನ್‌ಗೆ ಹೋಗುವುದಕ್ಕಿಂತ ಮುಂಚೆ ಚೆನ್ನಾಗಿದ್ದವರು ಪೋಲೀಸ್ ಸ್ಟೇಷನ್ನಿನಿಂದ ಹೊರಗೆ ಬರುವಾಗ ಹೆಣವಾಗಿ ಬರುತ್ತಾರೆ. ಪೋಲೀಸ್ ಸ್ಟೇಷನ್‌ನಿಂದ ಹೆಣ ಹೊರಗೆ ಬಂದರೆ ಎಲ್ಲರಿಗೂ ಸಂಶಯ ಬರುತ್ತದೆ. ಜನಗಳಿಗೆ ಹೇಗೆ ನಿಮ್ಮ ಸರಕಾರದ ಬಗ್ಗೆ ನಂಬಿಕೆ ಬರಬೇಕು? ಈ ವಿಷಯಗಳ ಕುರಿತಾಗಿ ನಾವು ೧೫ ದಿವಸಗಳಿಂದ ಚರ್ಚೆ ಮಾಡುತ್ತಾ ಇದ್ದೇವೆ. ಈಗ ಸರಕಾರದ ಮೇಲೆ ನಂಬಿಕೆ ಹುಟ್ಟಿಸತಕ್ಕಂಥ ಪರಿಸ್ಥಿತಿ ಇದೆಯೇ? ಸಾಯುವವರು ಏನೋ ಸತ್ತಿದ್ದಾರೆ, ಆ ಕುರಿತು ನೀವು ಸೂಕ್ತ ರೀತಿಯಲ್ಲಿ ಸರಿಯಾಗಿ ತನಿಖೆ ಮಾಡಿ ಜನಗಳಲ್ಲಿ ಏನೊಂದು ಸಂಶಯ ಬಂದಿದೆ ಅದನ್ನು ನಿವಾರಣೆ ಮಾಡುವುದಕ್ಕೆ ಪ್ರಯತ್ನ ಮಾಡಿದ್ದೀರಾ? ನಾವು ಇಲ್ಲಿ ದಿವಸವೂ ಅದನ್ನು ಕೇಳಿಕೊಳ್ಳುತ್ತಾ ಇರುವುದು ನೀವು ನಿಮ್ಮ ದಾರಿಯಲ್ಲಿ ನಡೆಯುವುದು ಇಷ್ಟೇ ಆಗಿರುವುದು. ಮಾನ್ಯ ಮುಖ್ಯಮಂತ್ರಿಗಳು ಮೊನ್ನೆ ಅಲ್ಲಿ ಆ ಕಾರಣಕ್ಕಾಗಿ ಸತ್ತರು, ಇಲ್ಲಿ ಈ ಕಾರಣ ಕ್ಕಾಗಿ ಸತ್ತರು ಎಂದು ಹೇಳಿದ್ದಾರೆ. ಪ್ರಸ್ತುತ ಈ ಕೇಸ್‌ನಲ್ಲಿ ವಿಚಾರಣೆ ಮಾಡಲು ಚೆನ್ನಯ್ಯ ಎನ್ನುವವನನ್ನು ಅರೆಸ್ಟ್ ಮಾಡಿದ್ದಾರೆ. ಹೀಗೆ ಅರೆಸ್ಟ್ ಆದವನು ಪೋಲೀಸ್ ಸ್ಟೇಷನ್‌ನಿಂದ ಹೊರಬರುವಾಗ ಹೆಣವಾಗಿ ಬಂದಿದ್ದಾನೆ. ಈ ಪರಿಸ್ಥಿತಿ ಉಂಟಾಗಲು ಯಾರು ಅವನಿಗೆ ಹೊಡೆದರು? ಒಂದು ವೇಳೆ ಅವನು ತನ್ನಷ್ಟಕ್ಕೆ ತಾನೇ ಉರುಲು ಹಾಕಿಕೊಂಡಿರ ಬೇಕೇ? ಇಲ್ಲದಿದ್ದರೆ ಯಾರಾದರೂ ಹೊಡೆದು ಸಾಯಿಸಿರಬೇಕು? ಹೀಗೆ ಏನಾದರೂ ಆಗಿರಬೇಕು. ಈಗ ಇವರು ತನ್ನಷ್ಟಕ್ಕೆ ತಾನೆ ಉರುಲು ಹಾಕಿಕೊಂಡು ಸತ್ತ ಎಂದು ಹೇಳಿದ್ದಾರೆ. ಹಾಗಾದರೆ ಕಂಬಳಿಯಲ್ಲಿ ಯಾರಾದರೂ ಉರುಲು ಹಾಕಿಕೊಳ್ಳುತ್ತಾರೆಯೇ? ನಾನಂತೂ ಕೇಳಿಲ್ಲ, ಹಗ್ಗದಲ್ಲಿ ಉರುಲು ಹಾಕಿಕೊಂಡು ಸತ್ತವರನ್ನು ಕೇಳಿದ್ದೇನೆ, ಪಂಚೆಯಲ್ಲಿ ಉರುಲು ಹಾಕಿಕೊಂಡಿದ್ದವರನ್ನು ಕೇಳಿದ್ದೇನೆ, ಆದರೆ ಹೀಗೆ ಕಂಬಳಿಯಲ್ಲಿ ಉರುಲು ಹಾಕಿಕೊಳ್ಳುತ್ತಾರೆಯೇ? ಆದುದರಿಂದ ಇದು ಲಾಕಪ್ಪಿನಲ್ಲಿ ಹೊಡೆದು ಸಾಯಿಸಿರತಕ್ಕಂಥ ಒಂದು ಪ್ರಸಂಗ ಎಂದುಭಾವಿಸ ಬೇಕಾಗುತ್ತದೆ. ಇವರು ಚೆನ್ನಯ್ಯ ಎನ್ನತಕ್ಕಂಥ ವ್ಯಕ್ತಿಯನ್ನು ಅರೆಸ್ಟ್ ಮಾಡಿ ಸಾಯಿಸಿದ ಮೇಲೆ ಪೋಲೀಸ್ ಸ್ಟೇಷನ್‌ನಿಂದ ಹೆಣವನ್ನು ಹೊಳಲಿಕ್ಕೆ ತಂದಿದ್ದಾರೆ. ಇಂತಹ ವಿಷಯಗಳ ಬಗ್ಗೆ ನಾವು ಸರಕಾರಕ್ಕೆ ಎಷ್ಟು ಸಾರಿ ಹೇಳಿದರೂ ಟೀಕೆ ಮಾಡಿದರೂ ಕೂಡ ಈ ರೀತಿಯಾದ ವರ್ತನೆ ಯನ್ನು ಮಾಡಬೇಡಿ ಎಂದು ಹೇಳಿದರೂ ಕೂಡ ಸರಕಾರದವರು ತಾವು ಮಾಡಿದ್ದೇ ಸರಿ ಎನ್ನುವ ವಾದವನ್ನು ಮಾಡುತ್ತಾ ಇದ್ದರೆ, ಅದು ಸರಿಯಾದುದಲ್ಲ ಎಂದು ಹೇಳಬೇಕಾಗುತ್ತದೆ. ಒಟ್ಟಿ

ಇಂತಹ ಪರಿಸ್ಥಿತಿಯು ರಾಜ್ಯದಲ್ಲಿ ಯಾವ ಕಾಲದಲ್ಲಿಯೂ ಉದ್ಭವವಾಗಿರಲಿಲ್ಲ. ಆದರೆ ನಿಮ್ಮ ಕಾಲದಲ್ಲಿ ಆಗುತ್ತಾ ಇದೆ. ಇದು ಈಗಲಾದರೂ ಕೊನೆಯಾಗಬೇಕು. ಇಂತಹ ಪ್ರಸಂಗಗಳ ಬಗ್ಗೆ ತಾವು ನಿಷ್ಪಕ್ಷಪಾತವಾಗಿ ಕ್ರಮವನ್ನು ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ನಿಮ್ಮ ಮಾನ್ಯ ಸರಕಾರದ ಮಾನ ಹೋಗುತ್ತದೆ. ನಾನೂ ಕೂಡ ಒಬ್ಬ ಲಾಯರ್ ಆಗಿ ಕೆಲಸ ಮಾಡಿದ್ದೇನೆ. ಈಘಟನೆಯ ಕುರಿತು ಹೇಳುವುದಾದರೆ ಯಾರೋ ಒಬ್ಬ ಯಕಶ್ಚಿತ್ ತಹಶೀಲ್ದಾರ್, ಕಾನೂನು ಗೊತ್ತಿಲ್ಲದಿದ್ದವನನ್ನು. ತಾಲ್ಲೂಕು ಮಾಜಿಸ್ಟ್ರೇಟ್ ಎಂದು ಅವನ ಹತ್ತಿರ ನೀವು ಸರ್ಟಿಫಿಕೇಟ್‌ನ್ನು ತೆಗೆದುಕೊಳ್ಳುತ್ತೀರಿ ಅವನು ಯಾವ ರೀತಿಯಲ್ಲಿ ಸರ್ಟಿಫಿಕೇಟನ್ನು ಕೊಡುತ್ತಾನೆ ಎಂದು ನನಗೂ ಗೊತ್ತಿದೆ. ನನ್ನ ಕ್ಷೇತ್ರದಲ್ಲಿಯೂ ತಹಶೀಲ್ದಾರ್ ಇದ್ದಾನೆ. ಅತನು ಪೋಲೀಸರು ಹೇಳಿದ ಹಾಗೆ ಕೇಳುತ್ತಾನೆ. ಅವರು ಹೇಳಿದಂತೆ ಬರೆಯುತ್ತಾನೆ. ನಿಜವಾದ ಪರಿಸ್ಥಿತಿಯನ್ನು ಅವನು ಬರೆಯುವುದಿಲ್ಲ. ಈಗ ಮೃತವ್ಯಕ್ತಿಗೆ ಮನೆಯಲ್ಲಿ ಹೆಂಡತಿ ಮಕ್ಕಳು ಇದ್ದಾರೆ. ಅವರಿಗೆ ಹೆಣವನ್ನು ದಫನ ಮಾಡುವುದಕ್ಕೆ ಇವರು ಬಿಟ್ಟಿಲ್ಲ. ಹೀಗೆಲ್ಲಾ ನಡೆದಿರುವಾಗ ನಾನು ತಮಗೆ ಹೇಳುತ್ತಾ ಇದ್ದೇನೆ, ಇದರಲ್ಲಿ ತಾವುಗಳು ಒಂದು ತೀವ್ರವಾಗಿರತಕ್ಕಂಥ ನಿಲುವನ್ನು ತೆಗೆದುಕೊಳ್ಳಬೇಕಾಗುತ್ತದೆ, ಸರಿಯಾದ ರೀತಿಯಲ್ಲಿ ಇದರ ಬಗ್ಗೆ ವಿಚಾರ ಮಾಡಬೇಕಾಗಿತ್ತದೆ. ಪೋಲೀಸರು ಯಾವರೀತಿಯಲ್ಲಿ ವರ್ತನೆ ಮಾಡಬೇಕೆಂದೂ ವಿಚಾರ ಮಾಡಬೇಕಾಗುತ್ತದೆ. ಇಂತಹ ವಿಷಯಗಳಲ್ಲಿ ಅವರಿಗೆ ಮೇಲ್ಪಟ್ಟು ಯಾರು ಮಂತ್ರಿಗಳು ಇರುತ್ತಾರೋ ಅವರು ಇಂತಹ ವಿಷಯಗಳ ಜವಾಬ್ದಾರಿಯನ್ನು ಹೊರಬೇಕಾಗುತ್ತದೆ. ಕಾರಣ ಏನೆಂದರೆ ಸರಕಾರ ಇಂತಹ ಜವಾಬ್ದಾರಿಯನ್ನು ಹೊತ್ತುಕೊಂಡಿರುವಾಗ ಶಾಂತಿ ಭಂಗ ಬರುವಹಾಗೆ ಯಾವುದೇ ಪರಿಸ್ಥಿತಿಯನ್ನು ಹೋಗಲು ಬಿಡಬಾರದು. ಆದುದರಿಂದ ತಹಶೀಲ್ದಾರರಿಂದ ಇಂತಹ ವಿಚಾರಣೆಯನ್ನು ಮಾಡತಕ್ಕಂಥಾದ್ದು ಸರಿಯಲ್ಲ. ಆದರ ಬದಲಾಗಿ ರೆಗ್ಯುಲರ್ ಮಾಜಿಸ್ಟ್ರೇಟ್ ಏನಿದ್ದಾರೆ ಅವರಿಂದ ಈ ವಿಷಯದ ತನಿಖೆ ಮಾಡಿಸಬೇಕು, ಸೂಕ್ತ ರೀತಿಯಲ್ಲಿ ವಿಚಾರಣೆಯನ್ನು ಮಾಡಿಸಬೇಕು.

ಈಗ ಯಾರೋ ಒಬ್ಬರನ್ನು ಅರೆಸ್ಟ್ ಮಾಡುತ್ತಾರೆ ಎಂದು ಇಟ್ಟುಕೊಳ್ಳೋಣ. ಅಂತಹವರನ್ನು ೨೪ ಗಂಟೆಗಳಿಗಿಂತ ಹೆಚ್ಚಿಗೆ ಸ್ಟೇಶನ್‌ನಲ್ಲಿ ಇಟ್ಟುಕೊಳ್ಳಲಿಕ್ಕೆ ಅವರಿಗೆ ಏನು ಅಧಿಕಾರ ಇದೆ? ಇಂತಹ ಸಂದರ್ಭದಲ್ಲಿ ಆ ಸುಬ್ರಹ್ಮಣ್ಯ ನಗರದ ಪೋಲೀಸ್ ಸ್ಟೇಷನ್‌ನವರು ಇವನನ್ನು ಹೆಚ್ಚು ಕಾಲ ಇಟ್ಟುಕೊಳ್ಳಲಿಕ್ಕೆ ಮ್ಯಾಜಿಸ್ಟ್ರೇಟ್‌ರವರಿಂದ ಏನಾದರೂ ಆರ್ಡರ್‌ನ್ನು ಪಡೆದಿದ್ದಾರೆಯೇ? ಎಂಬ ವಿಚಾರದ ಬಗ್ಗೆ ಪರೀಕ್ಷೆ ನಡೆಸಬೇಕು. ಹಾಗೆ ಅವರು ಆದೇಶವಿಲ್ಲದೆ ಲಾಕಪ್ಪಿನಲ್ಲಿ ಇಟ್ಟುಕೊಂಡು ಆ ಸಂದರ್ಭದಲ್ಲಿ ಪ್ರಕ್ತಿ ಸತ್ತಿದ್ದರೆ ಅದಕ್ಕೆ ಅವರೇ ಜವಾಬ್ದಾರರು ಎಂದು ಪರಿಗಣಿಸಬೇಕಾಗುತ್ತದೆ. ಮಾನ್ಯ ಮೊಯಿಲಿಯವರು ಹೇಳಿದಂತೆ ಸೆಕ್ಷನ್ ೩೦ನೇ ಪ್ರಕಾರ ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ. ಆ ಸ್ಟೇಷನ್‌ನವರು ಪೋಲೀಸರ ಜವಾಬ್ದಾರಿಯಂತ ಕೆಲಸವನ್ನು ಮಾಡಿಲ್ಲ, ಒಬ್ಬ ಸಾಮಾನ್ಯನಂತೆ ವರ್ತಿಸಿದ್ದಾರೆ. ಆದುದರಿಂದ ನಿರ್ದಿಷ್ಟ ಕಲಮ್ ೩೦ರ ಪ್ರಕಾರ ಅವರ ಮೇಲೆ ಚಾರ್ಜ್‌ಶೀಟ್ ಹಾಕಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತು ಇದರ ಚರ್ಚೆಗೆ ಪರವಾನಿಗೆಯನ್ನು ಏನು ಕೇಳಿದ್ದೀರಿ ಅದಕ್ಕೆ ತಮ್ಮ ಒಪ್ಪಿಗೆ ಕೊಡಬೇಕು ಮತ್ತು ಮಾನ್ಯ ಸದಸ್ಯರ ನಿಲುವಳಿ ಸೂಚನೆಗೆ ಒಕ್ಕೊರಲಿನಿಂದ ನಾನು ಬೆಂಬಲವನ್ನು ಕೊಟ್ಟು ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧಕ್ಷರೇ, ವಿರೋಧಪಕ್ಷದ ನಾಯಕರು ಮತ್ತು ಹಿರಿಯ ಸದಸ್ಯರು ಈ ವಿಚಾರವನ್ನು ಎತ್ತಿದ್ದಾರೆ. ಒಬ್ಬ ವ್ಯಕ್ತಿಯನ್ನು ಪೋಲೀಸರು ಬಂಧಿಸಿದ ಮೇಲೆ ಅವನ ಸಾವು ಪೋಲೀಸ್ ಸ್ಟೇಷನ್‌ನಲ್ಲಾಗಲಿ, ಕಸ್ಟಡಿಯಲ್ಲಾಗಲೀ ಏನಾದರು ಆದರೆ ಅದು ಸಂಶಯಾಸ್ಪದ ಅಸಮಾನಕ್ಕೆ ಒಳಗಾಗುತ್ತದೆ. ಇಂಥ ವಿಚಾರವನ್ನು ಸರಕಾರ ಗಂಭೀರವಾಗಿಯೇ ಇದನ್ನು ತೆಗೆದುಕೊಳ್ಳಬೇಕಾಗಿತ್ತದೆ ನನಗೆ ಇಂದು ದೊರೆತ ಮಾಹಿತಿಯ ಮೇಲೆ ಚೆನ್ನಯ್ಯನನ್ನು ೧೭-೫-೮೮ರಂದು ಸುಬ್ರಹ್ಮಣ್ಯನಗರ ಪೋಲೀಸ್ ಸ್ಟೇಷನ್‌ನವರು ಅರೆಸ್ಟ್ ಮಾಡಿದ್ದಾರೆ. ಈ ಮೊದಲು ಕ್ರೈಮ್ ನಂಬರ್ ೧೬೦/೮೮ ಅಂಡರ್ ಸೆಕ್ಷನ್ ೩೭೯ರ ಪ್ರಕಾರ ನಾಲ್ಕು ಆಟೋರಿಕ್ಷಾಗಳು ಕಳುವಾದ ಬಗ್ಗೆ ಒಂದು ಕೇಸ್ ರಿಜಿಸ್ಟರ್ ಆಗಿತ್ತು. ಆ ಸಂಬಂಧವಾಗಿ ಈ ಚೆನ್ನಯ್ಯನನ್ನು ಅರೆಸ್ಟ್ ಮಾಡಿದ್ದಾರೆ. ಅವನು ೧೮-೫-೮೮ರ ಬೆಳಿಗ್ಗೆ ೫ ಗಂಟೆಗೆ ಪೋಲೀಸ್ ಸ್ಟೇಷನಲ್ಲಿ ಸತ್ತ ವಿಚಾರ ಈಗಾಗಲೇ ಹೇಳಿದಂತೆ ಆಗಿದೆ.

ಶ್ರೀ ಪಂಪಾಪತಿ.—ನೀವು ೧೭ನೇ ತಾರೀಖು ಎಂದು ಏನು ಹೇಳುತ್ತೀರಿ. ಅಲ್ಲಿಗೆ ಮುಂಗಿಯಿತು ಆ ಕಥೆ.

ಅಧ್ಯಕ್ಷರು.—ಕೇಳಿ ಸ್ವಲ್ಪ.

ಶ್ರೀ ಎಸ್. ಆರ್. ಬೊಮ್ಮಾಯಿ.—ಆ ದಿವಸ ಅಲ್ಲಿ ಇದ್ದಂಥ ಹೆಡ್ ಕಾನ್‌ಸ್ಟೇಬರ್ ಕಾನ್‌ಸ್ಟೇಬಲ್ ತಮ್ಮ ರೌಂಡ್ಸ್‌ಗಾಗಿ ಹೋಗಿದ್ದರು. ಆ ರೀತಿ ಹೋಗಿಬರುವ ಹೊತ್ತಿಗೆ ಅವನು ಉರುಲು ಹಾಕಿಕೊಂಡ ವಿಚಾರ ಗೊತ್ತಾಗಿ ಇನ್ನೂ ಜೀವ ಇದ್ದುದರಿಂದ ಸ್ವಲ್ಪ ನೀರು ಕೂಡಾ ಬಾಯಿಗೆ ಹಾಕಿದ್ದಾರೆ. ಅವನು ಆಮೇಲೆ ಸತ್ತು ಹೋಗಿದ್ದಾನೆ. it am making it very clear.

ಒಬ್ಬ ಮಾನ್ಯ ಸದಸ್ಯರು.—ಉರುಲು ಹಾಕಿಕೊಂಡು...

(ಗೊಂದಲ)

ಅಧ್ಯಕ್ಷರು.—ಅವರಿಗೆ ಬಂದ ಮಾಹಿತಿಯನ್ನು ಹೇಳುತ್ತಿದ್ದಾರೆ ಕೇಳಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಇದು ನನ್ನ ಇಲಾಖೆಯ ಮಾಹಿತಿ. ನಾನು ಇಲಾಖೆಯ ವರದಿಯ ಆಧಾರದಮೇಲೆ ಕೆಲವು ವಿಚಾರಗಳನ್ನು ಹೇಳುತ್ತೇನೆ.

ಮುಂದೆ ಅದನ್ನು ಮ್ಯಾಜಿಸ್ಟ್ರೇಟ್‌ಗೆ ತಿಳಿಸಿದ್ದಾರೆ. ಎಕ್ಸಿಕ್ಯೂಟಿವ್ ಮ್ಯಾಜಿಸ್ಟ್ರೇಟ್ ಬಂದಿದ್ದಾರೆ. ನೋಡಿದ್ದಾರೆ. ಅದನ್ನು ಪೋಸ್ಟ್ ಪೊರ್ಟಮ್‌ಗೆ ಕಳುಹಿಸಿಕೊಟ್ಟಿದ್ದಾರೆ.

(ಗೊಂದಲ)

Sri M. Veerappa Moily.—We are not convinced about that report.

ಅಧ್ಯಕ್ಷರು.—ತಾವು ಮೊದಲು ಕೇಳಿ, ಆಮೇಲೆ ನೋಡೋಣ.

ಶ್ರೀ ಎಸ್. ಆರ್. ಬೊಮ್ಮಾಯಿ.—ತಾಲ್ಲೂಕು ಮ್ಯಾಜಿಸ್ಟ್ರೇಟ್ ಬಂದಿದ್ದಾರೆ. ಇನ್‌ಕ್ವೆಸ್ಟ್ ಮಾಡಿದ್ದಾರೆ, ಪೋಸ್ಟ್ ಮಾರ್ಟಮ್‌ಗೆ ಕಳುಹಿಸಿಕೊಟ್ಟಿದ್ದಾರೆ, ಪಂತೆ ೨.೪೫ ಪಿ. ಎಂ.ಗೆ ಆ ಡೆಡ್ ಬಾಡಿಯನ್ನು ಚನ್ನಯ್ಯನ ಹೆಂಡತಿಗೆ ಕೊಟ್ಟಿದ್ದಾರೆ.

(ಗೊಂದಲ)

ಶ್ರೀ ಆರ್. ವೆಂಕಟರಾಮಯ್ಯ.—ತಾವು ಪೋಸ್ಟ್ ಮಾರ್ಟಮ್ ರಿಪೋರ್ಟನ್ನು ನೋಡಿದ್ದೀರಾ?

(ಗೊಂದಲ)

ಅಧ್ಯಕ್ಷರು,—ನಿಮ್ಮ ಮಾಹಿತಿಯನ್ನು ನೀವು ಹೇಳಿದ್ದೀರಿ. ಅದೇ ರೀತಿ ಅವರಿಗೆ ಬಂದಂಥ ಮಾಹಿತಿಯನ್ನು ನೀವು ಕೇಳಿ,

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ಆಮೇಲೆ ೧೮-೫-೮೮ ರಾತ್ರಿ ೧೧-೪೫ಕ್ಕೆ ಕಾರ್ಪೊರೇಟರ್ ಗಳಾದಂಥ ಶ್ರೀ ರಾಮಚಂದ್ರಗೌಡ, ಶ್ರೀ ಲಕ್ಷ್ಮಣ್ ಶ್ರೀ ಸುರೇಶ್‌ಕುಮಾರ್ ಎಂಬುವರು ಪೋಲೀಸ್ ಕಮಿಷನರ್ ಅವರ ಬಳಿ ಬಂದು ಒಂದು ಕಂಪ್ಲೇಂಟ್ ಕೊಟ್ಟಿದ್ದಾರೆ. ಅದು ಇಂಗ್ಲೀಷ್‌ನಲ್ಲಿದೆ. ಅದಕ್ಕೆ ಚನ್ನಯ್ಯನ ಹೆಂಡತಿಯು ತಂಬ್ ಇಂಪ್ರೆಷನ್ ಹಾಕಿದ್ದಾರೆ.

(ಗೊಂದಲ)

ಅಧ್ಯಕ್ಷರು.—ಅವರು ಹೇಳುವುದೂ ನೀವು ಕೇಳಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಕಂಪ್ಲೇಂಟ್ ಕೊಟ್ಟ ಮೂರು ಜನರೂ ಜವಾಬ್ದಾರಿಯುತ ಜನ. ಮೂರು ಜನ ಕಾರ್ಪೊರೇಟರ್ಸ್, ಜವಾಬ್ದಾರಿ ಇದ್ದಂಥವರು, ಸಾರ್ವಜನಿಕರ ಒಂದು ಸೇವೆಯನ್ನು ಮಾಡತಕ್ಕಂಥವರು ಬಂದು ಕಂಪ್ಲೇಂಟನ್ನು ಕೊಟ್ಟಿದ್ದಾರೆ ಅವರಲ್ಲಿ.....

(ಗೊಂದಲ)

ಶ್ರೀ ಪಂಪಾಪತಿ.—ಅಧ್ಯಕ್ಷರೇ, ಪೋಲೀಸ್ ಸ್ಟೇಷನ್‌ನಲ್ಲಿದ್ದಾಗ ಸೈನ್.....

(ಗೊಂದಲ)

ಅಧ್ಯಕ್ಷರು.–ನೀವು ಹೇಳಿದ್ದನ್ನು ಅವರು ಎಷ್ಟು ಶಾಂತಿಯಿಂದ ಕೇಳಿದ್ದಾರೆ. ಅದೇ ರೀತಿ ಅವರು ಏನು ಹೇಳುತ್ತಾರೋ ಅದನ್ನು ಕೇಳಿ.

೬–೦೦ ಪಿ. ಎಂ.

ಶ್ರೀ ಎಸ್. ಆರ್. ಬೊಮ್ಮಾಯಿ.—ನನಗೆ ಬಂದಂತಹ ಮಾಹಿತಿ ಪ್ರಕಾರ ಕೆಲವು ವಿಚಾರಗಳನ್ನು ಇಲ್ಲಿ ಹೇಳಿದ್ದೇನೆ. ಅದು ಚನ್ನಯ್ಯನ ಹೆಂಡತಿಯ ತಂಬ್ ಇಂಪ್ರೆಷನ್ ಹೌದೋ ಅಲ್ಲವೋ ಎಂಬುದನ್ನು ವಿಚಾರ ಮಾಡಿಸಬೇಕಾಗುತ್ತದೆ.

ಶ್ರೀ ಎಂ. ವಲ್ಲಿಕಾರ್ಜುನ ಖರ್ಗೆ.—ಚನ್ನಯ್ಯನ ಹೆಂಡತಿಯ ಹೆಸರು ಪಾರ್ವತಪ್ಪ.

ಶ್ರೀ ಎಸ್. ಆರ್. ಬೊಮ್ಮಾಯಿ —ಇಲ್ಲಿ ಅನೇಕ ವಿಚಾರಗಳು ಪ್ರಸ್ತಾಪವಾಗಿದೆ. ೧೨ನೇ ತಾರೀಖಿಗೆ ಅರೆಸ್ಟ್ ಆದಂತಹ ವಿಚಾರ ೧೫–೧೬–೧೭ನೇ ತಾರೀಖಿಗೆ ಕಾರ್ಪೊರೇಟರ್ ಮತ್ತು ಅವರ ಬ್ರದರ್-ಇನ್-ಲಾ ಅವನನ್ನು ನೋಡಿದಂತಹ ವಿಚಾರ ಕೂಡ ಪ್ರಸ್ತಾಪವಾಗಿದೆ. ಜೊತೆಗೆ ಪಿಎಸ್‌ಐ ಹಣ ಕೊಡಲಿಕ್ಕೆ ಮತ್ತು ಕೆಲಸ ಕೊಡಿಸತಕ್ಕಂತಹ ಅಮಿಷ ತೋರಿಸತಕ್ಕಂತಹ ವಿಚಾರ ಕೂಡ ಇಲ್ಲಿ ಪ್ರಸ್ತಾಪವಾಗಿದೆ. ಮಾನ್ಯ ಮೊಯಿಲಿಯವರು ಖುದ್ದಾಗಿ ಅಲ್ಲಿಗೆ ಹೋಗಿ ಬಂದು ಕೆಲವು ವಿಚಾರಗಳನ್ನು ಈ ಮನೆಯ ಮುಂದಿಟ್ಟಿದ್ದಾರೆ. ನನಗೆ ದೊರೆತ ಮಾಹಿತಿ ಪ್ರಕಾರ ೧೭ನೇ ತಾರೀಖು ಅವನನ್ನು ಅರೆಸ್ಟ್ ಮಾಡಿದ್ದಾರೆ. ೧೭ನೇ ತಾರೀಖಿನ ದಿವಸ ೩ ರಿಕ್ವಿಸಗಳನ್ನು ಸೀಜ್ ಮಾಡಿದ್ದಾರೆ. ಆತನು ಕಳ್ಳನಾಗಲೀ ಸುಳ್ಳನಾಗಲೀ- ಪೋಲೀಸರಿಗೆ ಆತನನ್ನು ಹೊಡೆಯತಕ್ಕಂತಹ, ಕೊಲೆ ಮಾಡತಕ್ಕಂತಹ ಅಧಿಕಾರವಿಲ್ಲ. ಕಾನೂನನ್ನು ನಾವು ಪಾಲಿಸಬೇಕಾಗುತ್ತದೆ. ಈಗ ಪೋಸ್ಟ್ ಮಾರ್ಟಂ ರಿಪೋರ್ಟ್ ೧-೩೦ಕ್ಕೆ ಬಂದಿದೆ. ಅದರಲ್ಲಿ ಹೀಗೆ ಇದೆ.

ಶ್ರೀ ಆರ್. ವೆಂಕಟರಾಮಯ್ಯ.— ಒರಿಜಿನಲ್ ಫೈಲ್ ಓದಿ ಸ್ಲಿಪ್ಸ್‌ಗಳನ್ನು ಓದಬೇಡಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ರಿಪೋರ್ಟ್ ಇದೆ, ಅದರ ಆಧಾರದ ಮೇಲೆ ನಾನು ಹೇಳುತ್ತಿದ್ದೇನೆ. "Death is due to asphyxia,, as a result of hanging". It is a Medical Report, Post Martem report. ಈ ರಿಪೋರ್ಟಿನ ಹಿನ್ನೆಲೆ ಒಂದು. ತಾವು ಹೇಳಿದಂತಹ ವಿಚಾರಗಳು ಏನು ಇವೆ ಅದು ಬಹಳ ಗಂಭೀರವಾದ ವಿಚಾರಗಳಾಗಿವೆ. ತಮ್ಮ ಹೇಳಿಕೆಗಳಲ್ಲಿ ಬಂದಂತಹ ಎಲ್ಲಾ ವಿಚಾರಗಳು ತಪ್ಪು ಎಂದು ಹೇಳುವುದಕ್ಕೆ ನಾನು ಸಿದ್ಧನಿಲ್ಲ. ಈ ಸಾವಿನಿಂದ ಎಲ್ಲರಿಗೂ ಒಂದು ರೀತಿಯ ಸಂಶಯ ಬಂದಿದೆ. ಅನುಮಾನಕ್ಕೆ ಆಸ್ಪದವಾಗಿದೆ ಇಲ್ಲವೆಂದು ನಾನು ಹೇಳಂವುದಿಲ್ಲ. ೧೭ನೇ ತಾರೀಖಿನ ಬೆಳಿಗ್ಗೆ ಈ ಸಾವಾದರೆ ಅದೇ ದಿವಸ ಮಧ್ಯಾಹ್ನದ ಹೊತ್ತಿಗೆ ಸಂಬಂಧಪಟ್ಟ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಲಾಗಿದೆ. ಸಾರ್ಮಲ್ ಆಗಿ ಪೋಲೀಸ್ ಕಸ್ಟಡಿಯಲ್ಲಿ ಸಾವಾದರೆ ಸಬ್ ಡಿವಿಜನಲ್ ಮ್ಯಾಜಿಸ್ಟ್ರೇಟರವರು ವಿಚಾರಣೆ ಮಾಡುತ್ತಾರೆ. ಆದರೆ ಈ ಕೇಸ್‌ನಲ್ಲಿ ಮಾನ್ಯ ಮುಖ್ಯಮಂತ್ರಿಗಳು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಅವರಿಂದ ಎನ್‌ಕ್ವೈರಿಗೆ ಆರ್ಡರ್ ಮಾಡಿದರು. ಸಾವಾದ ದಿವಸವೇ ಸಸ್ಪೆಂಡ್ ಮಾಡಿದ್ದೇವೆ ಮತ್ತು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ವಿಚಾರಣೆಗೆ ಆರ್ಡರ್ ಮಾಡಿದ್ದೇವೆ. ಇಲ್ಲಿ ಸರಕಾರ ಯಾವ ರೀತಿ ನಡೆದುಕೊಂಡಿದೆಯೆಂಬುದನ್ನು ತಾವು ಅರ್ಥ ಮಾಡಿಕೊಳ್ಳಬೇಕು. ಇದಕ್ಕಿಂತ ಹೆಚ್ಚು ಮಾಡತಕ್ಕಂಥಾದ್ದು ನನಗೆ ಗೊತ್ತಿಲ್ಲ. ಇಂತಹ ವಿಚಾರಗಳು ಆರಂ ಗಂಟೆಗಳಲ್ಲಿ ಯಾವುದೇ ಸರಕಾರ ಸಂಬಂಧಪಟ್ಟ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿದ್ದು ಇಲ್ಲ. ಹಿಂದೆ ಯಾವ ಸರಕಾರ ಕೂಡ ಈ ರೀತಿ ಮಾಡಿಲ್ಲ ಆರು ಗಂಟೆಯಲ್ಲಿ ಅಧಿಕಾರಿಗಳನ್ನು ಸಸ್ಪೆಂಡ್ ಮಾಡತಕ್ಕಂಥಾದ್ದು ಮತ್ತು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಎನ್‌ಕ್ವೈರಿಗೆ ಆರ್ಡರ್ ಮಾಡತಕ್ಕಂಥಾದ್ದು ಹಿಂದೆ ನಡೆದಿಲ್ಲ, ನನಗೆ ಗೊತ್ತಿದ್ದ ಮಟ್ಟಿಗೆ ಯಾವ ಸರಕಾರ ಕೂಡ ಈ ರೀತಿ ಮಾಡಿಲ್ಲ.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ.—ಇದರಲ್ಲಿ ದೊಡ್ಡಸ್ತಿಕೆಯೇನೂ ಇಲ್ಲ. ತಾವು ಆ ರೀತಿಯೆಲ್ಲಾ ಯೋಚಿಸಿಕೊಳ್ಳಬೇಡಿ.

ಶ್ರೀ ಎಸ್. ಆರ್. ಬೊಪಮ್ಮಾಯಿ.—ಇದರಲ್ಲಿ ದೊಡ್ಡಸ್ತಿಕೆ ಇದೆ, ನಿನ್ನೆ ರಜಾ ಇತ್ತು ಆದೂ ಕೂಡ ಸರಕಾರ ಕ್ರಮವನ್ನು ತೆಗೆದುಕೊಂಡಿದೆ. ತಾವು ಹೇಳಿದ್ದನ್ನು ನಾವು ಗಂಭೀರವಾಗಿ ತೆಗೆದುಕೊಂಡಿದ್ದೇವೆ. ಅದೇ ರೀತಿ ಸರಕಾರ ಹೇಳಿದ್ದನ್ನು ಕೂಡ ನೀವು ಗಂಭೀರವಾಗಿ ತೆಗೆದುಕೊಳ್ಳಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ.—ತಾವು ಇದೇ ಧಾಟಿಯಲ್ಲಿ ಹೋದರೆ ಸರ್ಕಾರ ಇದನ್ನು ಲಘುವಾಗಿ ತೆಗೆದುಕೊಂಡಿದೆಯೆಂದು ಹೇಳಬೇಕಾಗುತ್ತದೆ. ಪರದಿಯಲ್ಲಿರುವುದನ್ನು ಹೇಳಿ ಆದರೆ ತಾವು ಕೂಡ ತಮ್ಮ ಆತ್ಮ ಸಾಕ್ಷಿಗೆ ಸರಿಯಾಗಿ ಕೆಲಸ ಮಾಡಬೇಕಾಗುತ್ತದೆ. ಇದನ್ನು ಗಂಭೀರವಾಗಿ ಪರಿಗಣಿಸ ಬೇಕಾಗಿಂತ್ತದೆ. ಆದರೆ ತಾವು ಇದನ್ನು ತೇಲಿಸಿ ಲಘುವಾಗಿ ತೆಗೆದುಕೊಂಡು ಪೋಲೀಸರಿಗೆ ಶಹಭಾಸ್ ಗಿರಿಯನ್ನು ಕೊಡಲಿಕ್ಕೆ ಹೊರಟರೆ ಈ ಬಗ್ಗೆ ನಾವು ಚಿಂತೆ ಮಾಡಬೇಕಾಗಂತ್ತದೆ.

SRI R. VENKATARAMAIAH.—I think he is not convinced about the Police Report. That is why he has suspicion about that ಅವರು ಸರಾಗವಾಗಿ ಹೇಳುತ್ತಿಲ್ಲ ಅವರು ವಿಧಿ ಇಲ್ಲದೇ ಹೇಳುತ್ತಿದ್ದಾರೆ.

ಅಧ್ಯಕ್ಷರು.—ಈಗ ಹೇಳುವುದನ್ನು ಕೇಳಿ.

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ವಿಚಾರದಲ್ಲಿ ಸರ್ಕಾರ ಬಹಳ ತ್ವರಿತವಾಗಿ ಕಾರ್ಯಕ್ರಮವನ್ನು ತೆಗೆದುಕೊಂಡಿದೆ ಎಂದು ಹೇಳುತ್ತಿದ್ದೇನೆ. Within 6 hours on a holiday, immediately after the information, all officers co cerned have been suspended and Magisterial enquiry ordered. ಇದಾದಮೇಲೆ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಇವತ್ತು ಬೆಳಿಗ್ಗೆ ಸ್ಮಶಾನಕ್ಕೆ ಹೋಗಿದ್ದಾರೆ. ಅಲ್ಲೆಲ್ಲಾ ಪರೀಕ್ಷೆ ಮಾಡಿ ವಿಚಾರಣೆ ಪ್ರಾರಂಭ ವಾಗಿದೆ. ಬಹಳ ತ್ವರಿತ ಗತಿಯಲ್ಲಿ ಕೂಡಾ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ವಿಚಾರಣೆ ಪ್ರಾರಂಭ ಮಾಡಿದ್ದಾರೆ ವಿಚಾರಣೆ ಇನ್ನೂ ನಡೆಯುತ್ತಿದೆ.

SRI K. H. PATIL.—Was he under Magestarial custody or Police Custody?

ಅಧ್ಯಕ್ಷರು.—ಪಾಟೀಲರೇ, ಅವರು ಸ್ವಲ್ಪ ಮುಕ್ತಾಯ ಮಾಡಲಿ ತಡೆಯಿರಿ,

ಶ್ರೀ ಎಸ್. ಆರ್. ಬೊಮ್ಮಾಯಿ.—ಪೋಲೀಸ್ ಕಸ್ಟಡಿ.....

(ಗೊಂದಲ)

ಶ್ರೀ ಕೆ. ಹೆಚ್. ಪಾಟೀಲ್.—ನೀವು ಹೇಳಿದ ಹಾಗೆ ೧೭ನೇ ತಾರೀಖಿಂದ ಅರೆಸ್ಟ್ ಆಗಿದ್ದರೆ...

ಶ್ರೀ ಎಸ್. ಆರ್. ಬೊಮ್ಮಾಯಿ.—೧೭ನೇ ತಾರೀಖಿಂದ ೧೮ನೇ ತಾರೀಖಿನ ಬೆಳಿಗ್ಗೆ ಮ್ಯಾಜಿಸ್ಟ್ರೇಟ್ ಮುಂದೆ ಅವರನ್ನು ಹಾಜರು ಮಾಡಬೇಕಾಗಿತ್ತು. according to my information ಅಷ್ಟರಲ್ಲಿ ಸತ್ತು ಹೋಗಿದ್ದಾರೆ. ೨ಳಿ ಗಂಟೆಯೊಳಗಾಗಿ ಅವನ ಸಾವಾಗಿದೆ. ಈಗ ಇನ್ನೂ ಕೂಡಾ ಆ ಹೆಣದ ಸಂಸ್ಕಾರವಾಗಿಲ್ಲ. ಅಲ್ಲಿ ಏನಾಗಿದೆ ಎಂದರೆ ಮಧ್ಯಾಹ್ನದಿಂದ ಈ ಪಾರ್ವತಮ್ಮ ಚನ್ನಯ್ಯನ ಹೆಂಡತಿ ಆ ಜಾಗದಲ್ಲಿ ಇಲ್ಲ. ಅವರು ಬರುವವರೆಗೆ ಸಂಸ್ಕಾರ ಮಾಡುವುದು ಕಷ್ಟವಾಗಿದೆ.

(ಗೊಂದಲ)

ಶ್ರೀ ಪಂಪಾಪತಿ.—ಆ ಅಮ್ಮ ಬಂದಮೇಲೆ ಕೂಡಾ ಹೆಣ ತೋರಿಸಿಲ್ಲ.

(ಗೊಂದಲ)

ಶ್ರೀ ಕೆ. ಹೆಚ್. ಪಾಟೀಲ್.—ಅದು ಏನೇ ಇರಲಿ, ಮರ್ಡರ್ ಇರಲಿ ಏನೇ ಇರಲಿ. ಈ ರೀತಿ ಸತ್ತ ಮೇಲೆ ಯುಶೊಯಲ್ ಆಗಿ ಅವರ ವಾರಸುದಾರರಿಗೆ ಹೆಣವನ್ನು ಕೊಡಬೇಕು Why they have not open that dead body?

ಶ್ರೀ ಎಸ್. ಆರ್. ಬೊಮ್ಮಾಯಿ.—ನನಗೆ ಬಂದ ಮಾಹಿತಿಯಂತೆ ೨–೪೫ಕ್ಕೆ ಪಾರ್ವತಮ್ಮನಿಗೆ ಹೆಣವನ್ನು ಕೊಟ್ಟಿದ್ದಾರೆ.

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ನಿನ್ನೆ ೨–೪೫ ಗಂಟೆಗೆ ಹೆಣವನ್ನು ಪಾರ್ವತಮ್ಮನಿಗೆ ಕೊಟ್ಟಿದ್ದಾರೆ. ಆದರೆ ನಿನ್ನೆಯಿಂದ ಇಪತ್ತಿನವರೆಗೂ ಶವಸಂಸ್ಕಾರವಾಗಿಲ್ಲ. ತಾವು ಹೇಳಿದ ವಿಚಾರಗಳು ತಪ್ಪು ಎಂದು ಯಾವಾಗಲೂ ಹೇಳಲಿಲ್ಲ, ಅದನ್ನು ವಿಚಾರಣೆ ಮಾಡೋಣ. ಇವತ್ತು ನಮ್ಮ ಇಲಾಖೆಯಿಂದ ವರದಿ ಬಂದಿದೆ. ತಮ್ಮ ವಿಚಾರಗಳನ್ನು ತಾವು ಇಲ್ಲಿ ವ್ಯಕ್ತ ಮಾಡಿದ್ದೀರಿ. ಈಗ ಅಲ್ಲಿ ಪಾರ್ವತಮ್ಮ ಇಲ್ಲ. ನನಗೆ ದೊರೆತ ಮಾಹಿತಿಯಂತೆ ಕೆಲವು ನಾಯಕರು ಆಪರನ್ನು ಕರೆದುಕೊಂಡು ಹೋಗಿದ್ದಾರೆ. ಅಲ್ಲಿ ಸ್ವಲ್ಪ ಈ ವಿಚಾರದಲ್ಲಿ ರಾಜಕೀಯ ಪ್ರವೇಶವಾಗಲಿಕ್ಕೆ ಪ್ರಾರಂಭವಾಗಿದೆ ಎನ್ನುವ ಅನುಮಾನ ಬಂದಿದೆ. ಅದು ಏನೇ ಇರಲಿ, ಅದು ಸರ್ಕಾರಕ್ಕೆ ಸಂಬಂಧಪಟ್ಟಿರತಕ್ಕಂಥ ವಿಚಾರ ಅಲ್ಲ. ಇದು ಒಂದು ಗಂಭೀರವಾಗಿರತಕ್ಕಂಥ ವಿಚಾರ.

ಶ್ರೀ ಬಿ. ಬಸವಲಿಂಗಪ್ಪ.—ಅಲ್ಲಿಗೆ ಮೊಯಿಲಿಯವರೂ ಹೋಗಿದ್ದಾರೆ. ತಾವು ಇದನ್ನು ರಾಜಕೀಯ ಪ್ರವೇಶ ಎಂದು ಹೇಳುತ್ತೀರಿ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಈಗ ಮಧ್ಯಾಹ್ನದಿಂದ ಆ ರೀತಿ ಪ್ರವೇಶ...

(ಗೊಂದಲ)

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಈಗ ಇವರಿಗೆ ಹೇಳಲು ಬಾಕಿ ಉಳಿದಿರುವುದು ಎಂದರೆ ಇದನ್ನು ಕಾಂಗ್ರೆಸ್‌ನವರು ಮಾಡಿರುವುದು ಎಂದು ಹೇಳುವುದು.

ಶ್ರೀ ಎಸ್. ಆರ್. ಬೊಮ್ಮಾಯಿ.—ಆ ರೀತಿ ನಾನು ಹೇಳಲಿಲ್ಲ

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಬಾಕಿ ಉಳಿದಿರುವುದು ಇದೊಂದೇ...

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ಆ ಪಾರ್ವತಮ್ಮನನ್ನು ಕೆಲವು ರಾಜಕೀಯ ಮುಖಂಡರು ಕರೆದುಕೊಂಡು ಹೋಗಿರುವುದು ನಿಜವಾಗಿದ್ದರೆ, ಅದನ್ನು ಹೇಳಬಾರದೇ ?

(ಗೊಂದಲ)

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಆ ಹೆಣ್ಣುಮಗಳನ್ನು ಸಮಾಧಾನ ಮಾಡುವುದಕ್ಕೆ ಕೆಲವರು ಕರೆದುಕೊಂಡು ಹೋಗಿರಬಹುದು.

ಶ್ರೀ ಎಸ್. ಆರ್. ಬೊಮ್ಮಾಯಿ.—ಸಮಾಧಾನ ಮಾಡುವುದಕ್ಕೆ ಹೋಗುವುದು ಬೇರೆ, ಪಂಪಾಪತಿಯವರು ಮಂತ್ರಿ ಮೊಯಿಲಿಯವರು ಹೋಗಿ ಸಮಾಧಾನ ಮಾಡಿ ಬಂದಿದ್ದಾರೆ, ಅದು ಬೇರೆ

(ಗೊಂದಲ)

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಆ ಹೆಣ್ಣುಮಗಳು ಬಾಯಿ ಬಾಯಿ ಬಡಿದುಕೊಂಡು ಗಂಡ ಸತ್ತು ಹೋಗಿದ್ದಾನೆ ಎಂದು ಅಳುತ್ತಿರುವಾಗ ಅಲ್ಲಿಗೆ ಕಾಂಗ್ರೆಸ್‌ನವರೇ ಹೋಗಬಹುದು, ಜನತಾದವರು ಹೋಗಬಹುದು.....

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ಆ ಹೆಣವನ್ನು ಅಲ್ಲಿಟ್ಟು ಹೋಗಿರುವ ವಿಚಾರವನ್ನು ಹೇಳುತ್ತಿದ್ದೇವೆ. ಆ ವಿಧವೆ ಹೆಣ ಬಿಟ್ಟು ಆರು ಗಂಟೆಯಲ್ಲಿ ಸ್ಮಶಾನವನ್ನು ಬಿಟ್ಟು ಹೋಗಿರತಕ್ಕಂಥ ವಿಚಾರವನ್ನು ಹೇಳುತ್ತಿದ್ದೇನೆ. ಅಲ್ಲಿ ಯಾರ್ಯಾರು ಹೋಗಿದ್ದಾರೆ, ಯಾರು ಕರೆದುಕೊಂಡು ಹೋಗಿದ್ದಾರೆ, ಅದು ಬೇರೆ ವಿಚಾರ ಇದು ಒಂದು ಗಂಭೀರವಾದಂಥ ವಿಚಾರ. ಪೋಲೀಸ್ ಕಸ್ಟಡಿಯಲ್ಲಿ ಈ ಸಾವು ಆಗಿದೆ. ಇದರ ಬಗ್ಗೆ ಸರಿಯಾದ ವಿಚಾರಣೆಯಾಗಬೇಕು ಹಾಗೂ ತಪ್ಪಿತಸ್ಥರಿಗೆ ಸರಿಯಾದ ಶಿಕ್ಷೆಯಾ

ಗಬೇಕು, ಸರಕಾರ ಇದರ ಬಗ್ಗೆ ಹಿಂದು ಮುಂದು ನೋಡುವುದಿಲ್ಲ. ಒಂದು ಸಲಹೆಯನ್ನು ವಿರೋಧ ಪಕ್ಷದ ನಾಯಕರಲ್ಲಿ ಒಬ್ಬರಾದ ಮಾನ್ಯ ವೊಯಿಲಿಯವರು ಕೊಟ್ಟಿದ್ದಾರೆ ಏನೆಂದರೆ ಸಿ.ಓ.ಡಿ.

(ಗೊಂದಲ)

ಶ್ರೀ ಪ್ರತಾಪ ಚಂದ್ರಶೆಟ್ಟಿ.—ಭಿನ್ನ ಮತೀಯರಲ್ಲಿ.....

ಶ್ರೀ ಎಸ್. ಆರ್. ಬೊಮ್ಮಾಯಿ,—ನಿಮ್ಮ ಜಿಲ್ಲೆಯವರಿದ್ದಾರೆ. ಅವರನ್ನು ಕೇಳಿಕೊಳ್ಳಿ. ಇಂತಹ ವಿಚಾರದಲ್ಲಿ ಲಘುವಾಗಿ ಮಾತನಾಡುವುದು ಬೇಡ. ಇದು ಬಹಳ ಗಂಭೀರವಾದ ವಿಚಾರ. ಪೋಲೀಸ್ ಕಸ್ಟಡಿಯಲ್ಲಿ ಸಾವಾಗಿದೆ, ಮಾನ್ಯ ಸದಸ್ಯರುಗಳು ಅನೇಕ ವಿಚಾರಗಳ ಬಗ್ಗೆ ಸಲಹೆಗಳನ್ನು ಕೊಟ್ಟಿದ್ದಾರೆ ಹಾಗೂ ಅವೇಕ ಸಂಗತಿಗಳನ್ನು ಹೇಳಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾವು ಹೇಳಿದ್ದ ವಿಷಯಕ್ಕೆ ಉತ್ತರ ಬರಲಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಪೋಲೀಸ್ ಇಲಾಖೆ ಕೊಟ್ಟಂತಹ ವರದಿ ಆಧಾರದ ಮೇಲೆ ನಾನು ಹೇಳಿದಂಥಾದ್ದು ಮತ್ತು ತಾವು ಹೇಳಿದಂಥಾದ್ದು ಈ ಮನೆಯ ಮುಂದಿದೆ, ಇದು ಬಹಳ ಗಂಭೀರವಾದ ವಿಚಾರವಾಗಿರುವುದರಿಂದ ಇದಕ್ಕೆ ಸಿ.ಓ.ಡಿ. ಯಿಂದ ವಿಚಾರಣೆ ಮಾಡಿಸತಕ್ಕಂಥಾದ್ದು ಸೂಕ್ತವಾದದ್ದು ಸರಕಾರ ಅದಕ್ಕೆ ಒಪ್ಪಿಕೊಳ್ಳುತ್ತದೆ. ಕೂಡಲೇ ಆದೇಶವನ್ನು ನಾವು ಕೊಡುತ್ತೇವೆ.

ಅಧ್ಯಕ್ಷರು.—ಮಾನ್ಯ ವೆಂಕಟರಾಮಯ್ಯನವರೇ ತಾವು ಕುಳಿತುಕೊಳ್ಳಿ. ಟೇಸ್ ಕೆಡಿಸುವುದಕ್ಕೆ ಹೋಗಬೇಡಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಸತ್ಯ ಸಂಗತಿ ಹೊರಕ್ಕೆ ಬರಬೇಕು. ತಪಿತಸ್ಥರಿಗೆ ಶಿಕ್ಷೆಯಾಗಬೇಕು ಇದು ಸರಕಾರದ ಇಚ್ಛೆಯಾಗಿದೆ. ವಿಚಾರಣೆಯಾದ ಮೇಲೆ ಸತ್ಯಾಂಶ ಏನೆಂಬುದೂ ಗೊತ್ತಾಗುತ್ತದೆ. ಇನ್ನೊಂದು ವಿಚಾರವನ್ನು ಮಾನ್ಯ ಸದಸ್ಯರು ಎತ್ತಿದ್ದಾರೆ. ಏನೆಂದರೆ, ಜ್ಯುಡಿಷಿಯಲ್ ಎನ್‌ಕ್ವೈರಿಗೆ ಆರ್ಡರ್ ಮಾಡಬೇಕು ಎಂದು. ಈಗಾಗಲೇ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್‌ರವರಿಂದ ಎನ್‌ಕ್ವೈರಿಯಾಗುತ್ತಿದೆ ಸಿ.ಓ.ಡಿ. ತನಿಖೆಗೆ ಸರಕಾರ ಒಪ್ಪಿಕೊಂಡಿದೆ. ಜ್ಯುಡಿಷಿಯಲ್ ಎನ್‌ಕ್ವೈರಿಯನ್ನು ಸಹ ಪೋಲೀಸ್ ಅಧಿಕಾರಿಗಳ ಮುಖಾಂತರವೇ ಮಾಡಿಸಬೇಕಾಗುತ್ತದೆ. It is a fact finding committee. It is time consuming. They have to depend upon our own police officers. Judicial enquiry is time consuming and they have to get the investigation done by the police officers. ಅದಕ್ಕಾಗಿ ಜ್ಯುಡಿಷಿಯಲ್ ಎನ್‌ಕ್ವೈರಿ ಮಾಡಿಸುವ ಅಗತ್ಯವಿಲ್ಲ, ಅವಶ್ಯಕತೆಯಿಲ್ಲ. ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಎನ್‌ಕ್ವೈರಿಯನ್ನು ಮುಂದುವರಿಸುತ್ತಿದ್ದೇವೆ. ಸಿ. ಓ. ಡಿ. ಎನ್‌ಕ್ವೈರಿಗೆ ತಕ್ಷಣ ಆಜ್ಞೆ ಮಾಡುತ್ತೇವೆ. ಇನ್ನು ಪರಿಹಾರದ ಬಗ್ಗೆ ಮಾನ್ಯ ಸದಸ್ಯರು ಪ್ರಶ್ನೆ ಎತ್ತಿದ್ದಾರೆ. ಈ ಬಗ್ಗೆ ಕಾನೂನನ್ನು ನಾವು ನೋಡುತ್ತಿದ್ದೇವೆ. ಪರಿಹಾರ ಕೊಡಬೇಕೆನ್ನುವ ವಿಚಾರ ಸರಕಾರಕ್ಕಿದೆ, ಆದರೆ ಯಾವ ಕಾನೂನಿನ ಕೆಳಗೆ ಎಷ್ಟು ಕೊಡಬೇಕೆಂಬುದರ ಬಗ್ಗೆ ಆಲೋಚನೆ ಮಾಡಿ ನೋಡಿ ಕೊಡುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ...

ಅಧ್ಯಕ್ಷರು.—ನಿಮ್ಮ ಅಭಿಪ್ರಾಯವನ್ನು ಸರಕಾರದವರು ಒಪ್ಪಿಕೊಂಡಿದ್ದಾರೆ. ಆದ್ದರಿಂದ ಇನ್ನು ಬೆಳೆಸಲಿಕ್ಕೆ ಹೋಗಬೇಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಹೆಣ ಇನ್ನೂ ಅಲ್ಲೇ ಇದೆ. ಪುನ: ಪೋಸ್ಟ್ ಮಾರ್ಟಂ ಮಾಡಿಸಬೇಕು. ಸಿ. ಓ. ಡಿ. ಎನ್‌ಕ್ವೈರಿಗೆ ಒಪ್ಪಿಕೊಂಡಿದ್ದಾರೆ. ಇದರ ಕೇಸ್ ಅನ್ನು ತಕ್ಷಣ ಸೆಕ್ಷನ್ ೩೦೨ರಲ್ಲಿ ರಿಜಿಸ್ಟರ್ ಮಾಡಿಸಬೇಕು ಎಂದು ನಾವು ಹೇಳಿದ್ದೇವೆ. ನಂತರ ಸಿಓಡಿ ಎನ್‌ಕ್ವೈರಿ ಆಗಲಿ. ಜ್ಯುಡಿಷಿಯಲ್ ಪ್ರೊಬ್ ಏಕೆ ಮಾಡಬೇಕೆಂದರೆ ಒಬ್ಬ ಸೆಷನ್ಸ್ ಜಡ್ಜ್ ಕೇಡರ್‌ರವರು ಎನ್‌ಕ್ವೈರಿ ಮಾಡಿದರೆ ವಿಚಾರಗಳು ಹೊರಕ್ಕೆ ಬರುತ್ತದೆ. ಅದೇ ಸಿಓಡಿಯಲ್ಲಿ ಇರತಕ್ಕಂಥಹವರ ಬಗ್ಗೆ ತಮಗೇ ಗೊತ್ತಿದೆ. ಇಲ್ಲಿ ಬೇಡವಾದಂತಹ ಇನ್ಸ್‌ಪೆಕ್ಟರ್‌ರವರನ್ನು ಅಂತಹ ಕಡೆಗೆ ಸೇರಿಸಂತಾರೆ, ನಂತರ ಅವರೂ ಇವರೂ ಒಂದಾಗಿ ಸತ್ಯ ಹೊರಗೆ ಬರುವುದಿಲ್ಲ. ಈ ಮಾತನ್ನು ಸರಕಾರ ಒಪ್ಪಬೇಕು ಎಂದು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಜ್ಯುಡಿಷಿಯಲ್ ಎನ್‌ಕ್ವೈರಿಗೆ ಸರಕಾರ ಒಪ್ಪುವುದಕ್ಕಾಗುವುದಿಲ್ಲ. ಇದು ಅನಾವಶ್ಯಕವೆಂದು ನನ್ನ ಅಭಿಪ್ರಾಯ. It is time consuming and it is a fact finding committee. Investigation is done through the same police. ಸಿಓಡಿ ಯಲ್ಲಿರತಕ್ಕಂತಹ ಪೋಲೀಸರ ಮುಖಾಂತರವೇ ತನಿಖೆ ಮಾಡಬೇಕಾಗುತ್ತದೆ. ಬೇಡವಾದಂತಹ ವರನ್ನು ಸಿಓಡಿಗೆ ಹಾಕುತ್ತೇವೆಂದು ಹೇಳುವುದು ಏನು ಇಡೆ, ಇದು ಸರಿಯಾದುದಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ —ತಾವು ಹೇಳುವುದು ಸಂಪೂರ್ಣ ಸರಿಯಲ್ಲ. ಜ್ಯುಡಿಷಿಯಲ್ ಪ್ರೋಬ್ ಆದರೂ ಕೂಡ ಪೋಲೀಸರ ಮುಖಾಂತರ ಮಾಡಿಸಬೇಕೆಂದು ಕೇಳುವುದು ಸರಿಯಲ್ಲ. ಡಿಸ್ಟ್ರಿಕ್ಟ್ ಜಡ್ಜ್ ಮುಖಾಂತರ ಸೆಷನ್ ಜಡ್ಜ್ ಮುಖಾಂತರ ಜ್ಯುಡಿಷಿಯಲ್ ಪ್ರೋಬ್ ಆದರೆ ಅವರು ಯಾರನ್ನು ಬೇಕೋ ಅವರನ್ನು ಕರೆಯಬಹುದು, ಪೋಲಿಸರನ್ನು ಕರೆಯಬಹುದು, ಸ್ಟೇಷನ್ ನಲ್ಲಿರುವವರನ್ನು ಕರೆಯಬಹುದು, ಹೊರಗಿನವರನ್ನು ಕರೆಯಬಹುದು. ನಾವು ಕೆಲವು ವಿಚ್ಯಾರ ಗಳನ್ನು ಹೇಳಿದ್ದೇವೆ, ಸ್ಮೋಲನ್ ಪ್ರಾವರ್ಟಿ ಬಗ್ಗೆ ಹಾಗೂ ವರ್ಜಿಂಟ್ಸ್ ಕಡೆಯಿಂದ ಹಣ ವಸೂಲು ಮಾಡಿದ್ದಾರೆಂದು ಹೇಳಿದ್ದೇವೆ. ವ್ಯಾಪಕವಾಗಿ ಹೇಳುತ್ತಿದ್ದೇವೆ. ಆದ್ದರಿಂದ ನ್ಯಾಯಾಂಗ ತನಿಖೆಯಿಂದ ಮಾತ್ರ ಸತ್ಯ ಸಂಗತಿ ಹೊರಕ್ಕೆ ಬರುತ್ತದೆ, ಇದನ್ನು ಪರಾಡಬೇಕು. ಪೋಲೀಸರ ಮೇಲೆ ಯಾವ ರೀತಿಯಾಗಿ ಕಳಂಕಕಾರಿಯಾದಂತಹ ಆಪಾದನೆಗಳು ಆಗಾಗ ಏನು ಬರುತ್ತವೆ, ಅವುಗಳಿಗೆ ಇಂತಹ ನ್ಯಾಯಾಂಗ ತನಿಖೆಯಿಂದ ಪರಿಹಾರ ಸಿಗಂತ್ತದೆ, Judicial probe can come out with some solution, ನ್ಯಾಯಾಂಗ ತನಿಖೆಯಿಂದ ಕೆಲವು ವಿಚಾರಗಳು ಹೊರಗಡೆ ಬರಲಿಕ್ಕೆ ಸಾಧ್ಯವಾಗುತ್ತದೆ. ತಪ್ಪಿತಸ್ಥರಲ್ಲವೆಂದು ಹೇಳಿದರೆ ಸತ್ಯ ಶೋಧನೆಯಾಗಂತ್ತದೆ ಇದಕ್ಕೆ ತಾವು ಏಕೆ ಒಪ್ಪಿಕೊಳ್ಳಬಾರದು ? ಜನರ ಮನಸ್ಸಿನಲ್ಲಿ ಈ ಬಗ್ಗೆ ಕೆಲವು ಆತಂಕಗಳು ಮತ್ತು ಸಂಶಯಗಳು ಬಂದಿವೆ. ಇವೆಲ್ಲಾ ಸಿ. ಓ. ಡಿ. ತನಿಖೆಯಿಂದ ಪರಿಹಾರವಾಗುವುದಿಲ್ಲ. ಆದ್ದರಿಂದ ತಾವು ಸತ್ಯಶೋಧನೆ ಮಾಡುವುದಕ್ಕೆ ತಡ ಮಾಡಬೇಡಿ. ತಾವು ಜಿಲ್ಲಾ ಮ್ಯಾಜಿಸ್ಟ್ರೇಟರಿಂದ ತನಿಖೆ ಮಾಡಿಸಬಹುದು. ಈ ಮ್ಯಾಜಿಸ್ಟ್ರೇಟ್ ಅವರು ಜಿಲ್ಲಾಧಿಕಾರಿ ಅವರೇ ಆಗಿರಬಹುದು ಆದರೆ ಲೀಗಲ್ ಆಗಿ ಸತ್ಯಶೋಧನೆ ಮಾಡುವುದಕ್ಕೆ ಸಂಪೂರ್ಣವಾದಂಥ ಸಾಧನ ಸಲಕರಣೆಗಳು ಅವರ ಹತ್ತಿರ ಇರುವುದಿಲ್ಲ. ಅವರಿಗೆ ನ್ಯಾಯಾಂಗ ತನಿಖೆ ಮಾಡಿಸುವಷ್ಟು ಶಕ್ತಿ ಇರುವುದಿಲ್ಲ. ಮುಖ್ಯವಾಗಿ ಈ ಜಿಲ್ಲಾ ಮ್ಯಾಜಿಸ್ಟ್ರೇಟರ ತನಿಖೆಯಿಂದ ಏನೂ ಸಾಧನೆ ಆಗುವುದಿಲ್ಲ ಇಂತಹ ಅಸ್ವಭಾವಿಕ ಸಾವು ಸಂಭವಿಸಿದಾಗ ನೀವು ತಹಶೀಲ್ದಾರರಿಂದ ಇಲ್ಲವೇ ಡಿ. ಸಿ. ಅವರ ಕಡೆಯಿಂದ ತನಿಖೆ ಮಾಡಿಸಿದರೆ, ಆ ಅಧಿಕಾರಿಗಳಿಗೆ ನ್ಯಾಯಯುತವಾದಂಥ ರೀತಿಯಲ್ಲಿ ಸಂಬಂಧಪಟ್ಟ ವರನ್ನು ಕರೆಯಿಸಿ ಪ್ರಶ್ನೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಮ್ಯಾಜಿಸ್ಟ್ರೇಟ್ ಅವರಿಂದ ಇಲ್ಲವೇ ಸಬ್-ಡಿವಿಜನಲ್ ಮ್ಯಾಜಿಸ್ಟ್ರೇಟ್ ಅವರಿಂದ ತನಿಖೆ ಮಾಡಿಸಿದರೆ ಸತ್ಯಶೋಧನೆ ಆಗುವುದಿಲ್ಲ. ಇವರು ಏನಿದ್ದರೂ ಸಾಮಾನ್ಯವಾದಂಥ ವಿಚಾರಣೆ ಮಾಡಬಹುದಷ್ಟೇ, ಇಂತಹ ಸಾಮಾನ್ಯ ವಿಚಾರಣೆಯಿಂದ ಪೋಲೀಸ್ ಇಲಾಖೆಗಾಗಲೀ ಅಥವಾ ಸರ್ಕಾರಕ್ಕಾಗಲೀ ಒಳ್ಳೆಯ ಹೆಸರು ಬರುವುದಿಲ್ಲ. ಇಂತಹ ವಿಚಾರಣೆಯಿಂದ ಜನರ ಮನಸ್ಸಿನಲ್ಲಿ ಒಳ್ಳೆಯ ವಿಶ್ವಾಸ ಹುಟ್ಟುವುದಿಲ್ಲ. ಆದ್ದರಿಂದ ತಾವು ದಯವಿಟ್ಟು ನ್ಯಾಯಾಂಗ ತನಿಖೆಗೆ ಒಪ್ಪಬೇಕು. ಇದನ್ನು ಪ್ರಾಮಾಣಿಕವಾಗಿ ಒಪ್ಪಿಕೊಳ್ಳಿ. ಈಗ ನೀವು ಪೋಲೀಸ್ ವರದಿಯನ್ನು ಓದುವಾಗ ಆ ವರದಿಯ ಬಗ್ಗೆ ತಮ್ಮ ಆತ್ಮ ವಿರೋಧ ಮಾಡುತ್ತಿತ್ತು. There was resistance in you. ಆದ್ದರಿಂದ ತಮ್ಮ ಬಾಯಲ್ಲಿ...

ಶ್ರೀ ವಿ. ಲಕ್ಷ್ಮೀಸಾಗರ್.—ಅವರ ಆತ್ಮ ವಿರೋಧ ಮಾಡುತ್ತಿತ್ತು ಎಂದು ಹೇಳುತ್ತಿದ್ದಾರೆ. ಅಂದರೆ ಅದನ್ನು ತಿಳಿದುಕೊಳ್ಳಲು ಇವರೇನಾದರೂ ಪರಕಾಯ ಪ್ರವೇಶ ಮಾಡಿದ್ದರೇ ?

ಶ್ರೀ ಎಂ. ವೀರಪ್ಪ ಮೊಯಿಲಿ.—ಇದರ ಬಗ್ಗೆ ತಾವು ನ್ಯಾಯಾಂಗ ತನಿಖೆಗೆ ಒಪ್ಪದಿದ್ದರೆ, ಸರ್ಕಾರ ಸತ್ಯಶೋಧನೆ ಮಾಡಲು ತಡ ಮಾಡುತ್ತಿದೆ, ಈ ಬಗ್ಗೆ ಸರ್ಕಾರ ಮುಚ್ಚುಮರೆ ಮಾಡಲು ಪ್ರಯತ್ನ ಮಾಡುತ್ತಿದೆ ಎಂಬ ಅಭಿಪ್ರಾಯ ಜನರ ಮನಸ್ಸಿನಲ್ಲಿ ಬರುತ್ತದೆ. ಆದ್ದರಿಂದ ನ್ಯಾಯಾಂಗ ತನಿಖೆಗೆ ನೀವು ಒಪ್ಪಿಕೊಳ್ಳಬೇಕು.

ಶ್ರೀ ಆರ್. ವೆಂಕಟರಾವಪ್ಪ.—ನ್ಯಾಯಾಂಗ ತನಿಖೆ ನಡೆಸಿದರೆ ವರದಿ ಬರುವುದು ಬಹಳ ತಡವಾಗುತ್ತದೆಂದು ಹೇಳುತ್ತಿದ್ದಾರೆ. ಹಾಗಿದ್ದರೆ ಇದು ಮೆಲ್ನೋಟಕ್ಕೆ ಮರ್ಡರ್ ಕೇಸ್ ಎಂದು

ಕಂಡುಬಂದಿರುವುದರಿಂದ ಮರ್ಡರ್ ಕೇಸ್ ಎಂದು ದಾಖಲೆ ಮಾಡಿಸಿ ಸಿ. ಓ. ಡಿ. ಮೂಲಕ ಏತಕ್ಕೆ ತನಿಖೆ ಮಾಡಿಸಬಾರದು ?

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಖಾರ್ಗ ಅವರು ಪುನ: ಪೋಸ್ಟ್ ಮಾರ್ಟಮ್ ಆಗಬೇಕೆಂದು ಹೇಳಿದ್ದಾರೆ. District Magistrate is already seized of the enquiry. ಅವರು ಇವೊತ್ತಿ, ಅಥವಾ ನಾಳೆ ತಪ್ಪ ವರದಿಯನ್ನು ಕೊಡುತ್ತಾರೆ. ಪೈ ಮಾಫೇಸಿ ರಿಪೋರ್ಟ್ ಕೊಡುತ್ತಾರೆ. ಆವರ ವರದಿ ಬಂದಮೇಲೆ ಇದನ್ನು ಯಾವ ರೀತಿ ಮಾಡಬೇಕೆಂಬುದನ್ನು ನೋಡುತ್ತೇವೆ. ಪೋಲೀಸರು ಸಹ ಹೆಣ ಸಾಡುವುದು ಬೇಡ ಹೂಳಬೇಕೂ ಎಂದು ಸಲಹೆ ಮಾಡಿದ್ದಾರೆ. ಸಿ. ಓ. ಡಿ. ತನಿಖೆಯಿಂದ...

ಶ್ರೀ ಎಂ ವೀರಪ್ಪಮೊಯಿಲಿ.—ತಾವು ಕೆಲವು ನಾಯಕರು ಮಧ್ಯರಾತ್ರಿಯಲ್ಲಿ ಅಲ್ಲಿಗೆ ಹೋಗಿದ್ದರೆಂದು ಹೇಳಿದಿರಿ. ಅಲ್ಲಿಗೆ ಕೆಲವು ಕಾರ್ಪೊರೇಟರ್ಸ್ ಹಾಗೂ ಕೆಲವು ಉನ್ನತ ಅಧಿಕಾರಿಗಳೂ ಸಹ ಬಂದಿದ್ದರು. ಆದ್ದರಿಂದ ತಾವು ಅನಾವಶ್ಯಕವಾಗಿ ಯಾರ ಮೇಲೂ ಆಪಾದನೆ ಮಾಡುವುದು ಸರಿಯಲ್ಲ. Because I was an eye withness. ಅಲ್ಲಿಗೆ ಬಂದಿದ್ದವರು ಮಧ್ಯರಾತ್ರಿಯಲ್ಲಿಯೇ ಹೆಣವನ್ನು ಹೂಗಿಯಲಿಕ್ಕೆ ಸಲಹೆ ಮಾಡಿದರು. ಇದನ್ನು ಒಪ್ಪಿಕೊಳ್ಳುವುದು ಒಳ್ಳೆಯದೆಂದು ನಾನು ಸಹ ಅವರಿಗೆ ಸಲಹೆ ಮಾಡಿದೆ. ಹೆಣವನ್ನು ಬಹಳ ಕಾಲ ಇಟ್ಟುಕೊಳ್ಳುವುದು ಬೇಡ ಎಂದು ನಾನು ಹೇಳಿದೆ. ಅಲ್ಲಿದ್ದವರು ಸಹ ಇದೇರೀತಿ ನಾವೂ ಸಹಸಲಹೆ ಮಾಡುತ್ತಿದ್ದೇವೆಂದು ಹೇಳಿದರು. ಅಲ್ಲಿ ನಾನು ಮಾತ್ರವಲ್ಲ. ಬಿ.ಜೆ.ಪಿ. ನವರು ಮತ್ತು ಎಲ್ಲ ಪಾರ್ಟಿಯವರು ಸಹ ಇದ್ದರು ನಾವೆಲ್ಲರೂ ಹೆಣವನ್ನು ಹೆಚ್ಚು ಕಾಲ ಇಟ್ಟುಕೊಳ್ಳುವುದು ಬೇಡವೆಂದು ಅವರಿಗೆ ಸಲಹೆ ಮಾಡಿದ್ದೇವೆ. ಅಲ್ಲಿದ್ದವರೆಲ್ಲಾ ಪ್ರಾಮಾಣಿಕವಾದ ರೀತಿಯಲ್ಲಿ ಅವರಿಗೆ ಸಲಹೆ ಮಾಡಿದ್ದಾರೆ. ಆದ್ದರಿಂದ ತಾವು ಯಾರ ಮೇಲೂ ಅನುಮಾನ ಪಡಬಾರದು. ಈ ಬಗ್ಗೆ ಅಲ್ಲಿದ್ದ ಜನರು, ಮತ್ತು ಮೃತನ ಸಂಬಂಧೀಕರು ಹೇಳಿದರೂ ಸಹ ಮೃತನ ಹೆಂಡತಿ ಇದಕ್ಕೆ ಒಪ್ಪುತ್ತಿಲ್ಲವೆಂದು ಮಾತನಾಡಿ ಕೊಳ್ಳುತ್ತಿದ್ದರು. ಏನಾದರೂ ಮಾಡಿ ಒಪ್ಪಿಸಿ, ಹೆಣವನ್ನು ಹೂಗಿಯಿರಿ, ಮತ್ತೆ ಬೇಕಾದರೆ ಹೆಣವನ್ನು ಹೊರತೆಗೆದು ರೀ ಪೋಸ್ಟ್‌ಮಾರ್ಟಮ್ ಮಾಡಬಹುದೆಂದು ನಾನು ಸಲಹೆ ಮಾಡಿದೆ Let the body be disposed off ಎಂದು ನಾನು ಆಡ್ವೈಜ್ ಮಾಡಿದೆ. ಹೆಣವನ್ನು ಬಹಳಕಾಲ ಇಟ್ಟುಕೊಂಡರೆ ಒಂದು ರೀತಿಯ ಉದ್ರೇಕಕಾರಿಯಾದಂಥ ಭಾವನೆಗಳು ಮೃತನ ಹೆಂಡತಿಗೆ ಬರುತ್ತವೆ, ಮೃತನ ಸಂಬಂಧೀಕರಿಗೆ ಬರುತ್ತದೆ, ಅವರ ತಂದೆತಾಯಿಗಳಿಗೆ ಬರುತ್ತದೆ, ಆದ್ದರಿಂದ ಹೆಣವನ್ನು ಹೂಗಿಯಿರಿ ಎಂದು ಸಲಹೆ ಮಾಡಿದೆ. ಇಂತಹ ಒಂದು ಸಂದರ್ಭದಲ್ಲಿ ತಾವು ಯಾರ ಮೇಲೂ ಆಪಾದನೆ ಮಾಡುವುದಕ್ಕೆ ಹೋಗಬೇಡಿ. ಇದರಿಂದ ನಿಮ್ಮನ್ನ ದೇವರು ಸಹ ಮೆಚ್ಚಲಿಕ್ಕಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಆ ಕಾರ್ಪೊರೇಟರ್ ಮೇಲೆ ಏನಾದರೂ ಹೇಳಿದೆನೇ ವೆ ಯಿಲಿಯವರೇ ಊಹೆ ಮಾಡಿ ಹೇಳುತ್ತಿದ್ದಾರೆ. ನಾನು ಆ ಕಾರ್ಪೊರೇಟರ್ ಹೆಸರು ಹೇಳಿದನೆ ಅವರ ಮೇಲೆ ಸಂಶಯದಿಂದ ಹೇಳಿದನೇ. ಯಾರ ಮೇಲೂ ಹೇಳಲಿಲ್ಲ ಕೆಲವರು ಮೃತನ ಹೆಂಡತಿಯನ್ನು ಕರೆದುಕೊಂಡು ಹೋದಂಥ ವಿಚಾರ ಹೇಳಬೇಕಾಗುತ್ತದೆ. ಅದನ್ನು ನಾನು ಮುಂದೆ ಬೆಳಸಲಿಲ್ಲ. ನನ್ನ ರಿಪೋರ್ಟ್ ಪ್ರಕಾರ ಕಂಪ್ಲೇಂಟ್ ಮೇಲೆ ಇರತಕ್ಕಂಥ ಥಂಬ್ ಇಂಪ್ರೆಷನ್ ಪಾರ್ವತಮ್ಮನದು ಅಲ್ಲ ಎಂದು ಹೇಳಿದೆ. ನಾನು ಹೇಳಬಾರದು ಎಂದು ಬಿಟ್ಟಿದ್ದೆ. ೧೧-೪೫ಕ್ಕೆ ಅವರು ಕಂಪ್ಲೇಂಟ್ ಕೊಟ್ಟಿದ್ದಾರೆ. My information is that it is not her thum impression. ಅದನ್ನೂ ಕೂಡ ನಾನು ಹೇಳಲಿಕ್ಕೆ ಹೋಗಲಿಲ್ಲ. ಜವಾಬ್ದಾರಿಯುತರಾದಂಥ ಜನ ಕಾರ್ಪೊರೇಟರ್ಸ್ ಏಕೆ ಹೋಗುತ್ತಾರೆ, ಇದು ಸಾರ್ವಜನಿಕ ವಿಚಾರ ಇದೆ, ಇದರಲ್ಲಿ ಏನಾದರೂ ನ್ಯಾಯ ದೊರಕಿಸಿಕೊಡಬೇಕು ಎಂದು ಹೋಗುತ್ತಾರೆ. My information is the thumb impression is not hers.

SRI R. VENKATARAMAIAH.—Why do you doubt ? ಯಾರದು ಎಂದು ತಮಗೆ ಗೊತ್ತಿದೆಯೇ ?

SRI S.R. BOMMAI.—I am giving you my information. ಅವರದು ಅಲ್ಲ ಅಂದರೆ ಯಾರದು ಎಂದು ಹೇಳುವುದಕ್ಕಾಗುತ್ತದೆಯೇ.

SRI B. BASAVALINGAPPA.—Anybody can give first information under criminal law,

SRI S. R. BOMMAI.—Anybody has got right to put thumb impression but not under thumb impression of a wrong person. ಅದು ಆಗುವುದಿಲ್ಲ. ತಾವು ಕೊಡಬಹುದು. ತಮ್ಮ ಸಿಗ್ನೇಚರ್‌ನಲ್ಲಿ ಕಂಪ್ಲೈಂಟ್ ಕೊಡತಕ್ಕಂಥ ಹಕ್ಕು ಇದೆ, ಪ್ರತಿಯೊಬ್ಬ ನಾಗರೀಕರಿಗೂ ಇದೆ. ನಾನು ಈ ಸಮಯದಲ್ಲಿ ಇಷ್ಟೇ ಹೇಳುತ್ತೇನೆ. ಮಾನ್ಯ ಅಧ್ಯಕ್ಷರೆ, ಸರ್ಕಾರದ ಇಚ್ಛೆ ಸತ್ಯವನ್ನು ಹಂಡುಕಿ ತೆಗೆದು ತಪ್ಪಿತಸ್ಥರಿಗೆ ಶಿಕ್ಷೆ ಕೊಡತಕ್ಕದ್ದು ಆಗಿದೆ. ಸಿಒಡಿ ಎನ್‌ಕ್ವೈರಿ ಮಾಡಂತ್ತಾ ಇದ್ದೇವೆ, ಇವತ್ತಿನಿಂದ ವ್ಯಾರಂಭವಾಗುತ್ತದೆ. ಡಿಪ್ಟಿಕ್ಟ್ ಮ್ಯಾಜಿಸ್ಟೇಟ್ ಎನ್‌ಕ್ವೈರಿ ನಡೆದಿದೆ. ಅದಕ್ಕಾಗಿ, ರಿಪೋರ್ಟ್‌ಗಾಗಿ ಕಾಯಂತ್ತಾ ಇದ್ದೇವೆ. ಅವರ ರಿಪೋರ್ಟ್‌ಮೇಲೆ ಏನೇನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ. ನ್ಯಾಯಾಂಗ ತನಿಖೆ ಅವಶ್ಯವಿಲ್ಲ, ಅದನ್ನು ಒಪ್ಪಲಿಕ್ಕೆ ಆಗುವುದಿಲ್ಲ.

ಶ್ರೀ ಎಂ. ವಂಲ್ಲಿಕಾರ್ಜುನ ಖಾರ್ಗೆ.—ಮಾನ್ಯ ಅಧ್ಯಕ್ಷರೇ, ನಾನು ಏನು ಹೇಳುವುದು ಅಂದರೆ, ಸರ್ಕಾರದವರು ಪುನಃ ಪೋಸ್ಟ್‌ಮಾರ್ಟಂ ಮಾಡುವುದಕ್ಕೂ ಒಪ್ಪುವುದಿಲ್ಲ, ಪರಿಹಾರ ಕೊಡಲಿಕ್ಕೂ ಒಪ್ಪುವುದಿಲ್ಲ, ಆಮೇಲೆ ಸೆಕ್ಷನ್ ೩೦೨ ಪ್ರಕಾರ ಮರ್ಡರ್ ಕೇಸ್ ರಿಜಿಸ್ಟರ್ ಮಾಡುವುದಕ್ಕೂ ಒಪ್ಪುವುದಿಲ್ಲ, ಆಮೇಲೆ ಜುಡಿಶಿಯಲ್ ಎನ್‌ಕ್ವೈರಿ ಮಾಡಿಸಿರಿ ಅಂದರೆ ಅದಕ್ಕೂ ಒಪ್ಪುವುದಿಲ್ಲ, ಪರಿಹಾರ ಕೊಡುವುದಕ್ಕೂ ಒಪ್ಪುವುದಿಲ್ಲ ಅಂದರೆ, ಅದಕ್ಕೆ ನಾವು ಹೇಳಬೇಕಾಗುತ್ತದೆ, ಈ ಸರ್ಕಾರಕ್ಕೆ ಮೈಂಡ್ ಇಲ್ಲ, ಅಂದರೆ ಇದರಲ್ಲಿ ನಿಷ್ಪಕ್ಷಪಾತವಾದ ಎನ್‌ಕ್ವೈರಿ ಆಗಬೇಕು ಎನ್ನತಕ್ಕಂಥ ಮನಸ್ಸು ಇವರಿಗಿಲ್ಲ ಎಂದು ನನಗನ್ನಿಸುತ್ತದೆ. ಅಧ್ಯಕ್ಷರೇ, ಇದರಲ್ಲಿ ಏನಾಗುತ್ತದೆ ಅಂದರೆ, ಒಂದುವೇಳೆ ಪ್ರಾಮಾಣಿಕವಾಗಿ ಸತ್ಯ ಹೊರಗಡೆ ಬರಬೇಕು ಎಂಬ ಇಚ್ಛೆ ಅವರಿಗೆ ಇತ್ತು ಅಂದರೆ ಜುಡಿಶಿಯಲ್ ಪ್ರೋಬ್‌ಗೆ ಏಕೆ ಒಪ್ಪಬಾರದು. ಇದರ ಅರ್ಥ ಏನು ತೋರಿಸುತ್ತದೆ ಅಂದರೆ, ಇದನ್ನು ಮರ್ಡರ್ ಕೇಸ್ ಎಂದು ಇವರು ಒಪ್ಪುವುದಿಲ್ಲ. ಏಕೆಂದರೆ, ನಾಳೆ ಅವರ ಮೇಲೆ ಚಾರ್ಜ್‌ಶೀಟ್ ಹಾಕಬೇಕಾಗುತ್ತದೆ ಎಂದು ತಪ್ಪಿಸಿಕೊಳ್ಳುತ್ತಾ ಇದ್ದಾರೆ. ಜುಡಿಷಿಯಲ್ ಪ್ರೋಬ್ ಏಕೆ ಬೇಡ ಅನ್ನುತ್ತಾರೆ ಎಂದರೆ ಸತ್ಯಾಂಶ ಹೊರಗೆ ಬರುತ್ತದೆ ಎಂದು ತಪ್ಪಿಸಿಕೊಳ್ಳುತ್ತಾ ಇದ್ದಾರೆ. ಪೋಸ್ಟ್‌ಮಾರ್ಟಂ ಇನ್ನೊಂದು ಸಲ ಮಾಡಿದರೆ ತಿರುಗಿ ಪೋಲೀಸರ ಮೇಲೆ ಏನು ಆಪಾದನೆ ಬರುತ್ತದೋ ಎಂದು ಅನುಮಾನ. ಹೀಗಾಗಿ ಪೋಲೀಸರಿಗೆ ಪ್ರೊಟೆಕ್ಷನ್ ಮಾಡುವ ದೃಷ್ಟಿಯಿಂದ ಇವರು ಈ ರೀತಿ ಮಾಡುತ್ತಾ ಇದ್ದಾರೆ. ಇದನ್ನು ಪ್ರೊಟೆಸ್ಟ್ ಮಾಡಿ ನಾವು ವಾಕೌಟ್ ಮಾಡುತ್ತಾ ಇದ್ದೇವೆ.

(All the Congress (I) members staged a walk-out)

ಅಧ್ಯಕ್ಷರು.—ಈಗ ನಾನು ರೂಲಿಂಗ್ ಕೊಡುತ್ತೇನೆ. ಈಗ ನಾನು ಎರಡೂ ಕಡೆಯ ವಾದ ವನ್ನು ಕೇಳಿದ್ದೇನೆ. ಸರ್ಕಾರದವರು ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದಾರೆ. ಆದುದರಿಂದ ನಿಲುವಳಿ ಸೂಚನೆಗೆ ನನ್ನ ಅನುಮತಿಯನ್ನು ನಿರಾಕರಣೆ ಮಾಡಿದ್ದೇನೆ.